ಸೆಪ್ಟೆಂಬರ್ 2013
ಬೆಲೆ ರೂ. 1

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ



## ತೆಲಂಗಾಣ:

## ಮತ್ತೆ ಹೊಸ ರಾಜ್ಯಗಳ ಉದಯಕ್ಕೆ ನಾಂದಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 12
ಸೆಪ್ಟೆಂಬರ್ 2013, ಬೆಲೆ ರೂ. 1

ಅಭಿಮತ ಸಂಪಾದಕ ಮಂಡಳಿ

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ

## ನೇರ ಮಾತು

ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯೋತ್ಸವ ದಿನದಂದು ಧ್ವಜಾರೋಹಣ ಮಾಡಿ ಮಾಜಿ ರಾಜ್ಯಪಾಲ ಹಾಗೂ ಸಂಸದ ಶ್ರೀ ರಾಮಾ ಜೋಯಿಸ್ ಅವರು ಭಾರತದ ಅಖಂಡತೆಯನ್ನು ಕಾಪಾಡಿಕೊಳ್ಳುವ ಅಗತ್ಯವಿದೆ ಎಂದರು. ಭಾರತದ ಶಾಂತಿ ಹಾಗೂ ಅಖಂಡತೆಯನ್ನು ಒಡೆಯಲು ಹೊರಗಿನ ಶಕ್ತಿಗಳು ಪ್ರಯತ್ನಿಸುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಸ್ವಾರ್ಥ ಸಾಧನೆಗಾಗಿ ರಾಜ್ಯಗಳನ್ನು ತುಂಡು ತುಂಡಾಗಿಸುವ ಪ್ರಯತ್ನ ನಡೆಯುತ್ತಿದೆ, ಇದು ದೇಶದ ಹಿತದೃಷ್ಟಿಯಿಂದ ಒಳಿತಲ್ಲ ಎನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸಿದರು.

ಚುನಾವಣೆ ದಿನ ಹತ್ತಿರವಾದಂತೆ ರಾಜಕೀಯದ ಲೆಕ್ಕಾಚಾರ ಆರಂಭವಾಗುವುದು. ಈ ಲೆಕ್ಕಾಚಾರದಿಂದಲೇ ತೆಲಂಗಾಣ ರಾಜ್ಯ ರಚನೆಯ ಬಗ್ಗೆ ಘೋಷಣೆಯಾಯಿತು. ಇದರ ಬೆನ್ನಲ್ಲೇ ಸೌರಾಷ್ಟ್ರ, ವಿದರ್ಭ, ಬುಂದೇಲ್‌ಖಂಡ್ ಹಾಗೂ ಕರ್ನಾಟಕದಿಂದ ಕೊಡಗು ಮತ್ತು ತುಳುನಾಡು ಪ್ರತ್ಯೇಕ ರಾಜ್ಯವಾಗಬೇಕೆಂಬ ಆಂದೋಲನಗಳು ಮತ್ತೆ ಚುರುಕುಗೊಂಡಿವೆ.

ಕರಾವಳಿಯ ತುಳುನಾಡು, ವೀರರ ನಾಡು ಕೊಡಗು ಕರ್ನಾಟಕದ ಅವಿಭಾಜ್ಯ ಅಂಗವಾಗಿರಬೇಕೆಂಬುದು ಹೆಚ್ಚಿನ ತುಳುವರ ಮತ್ತು ಕೊಡಗರ ಆಶಯ. ಕರ್ನಾಟಕದ ಅಖಂಡತೆಗೆ ಎಂದೂ ಧಕ್ಕೆಯಾಗಬಾರದು. ಈ ಬಗೆಯಲ್ಲಿ ರಾಜ್ಯವನ್ನು ಪ್ರತ್ಯೇಕಿಸಿ ಬೇರೆ ರಾಜ್ಯವನ್ನು ಕೇಳುವ ರಾಜಕೀಯ ಪ್ರೇರಿತ ಯೋಚನೆಗೆ ಬದಲಾಗಿ ಕರ್ನಾಟಕದ ಭಾಗವಾದ ಕಾಸರಗೋಡನ್ನು ರಾಜ್ಯಕ್ಕೆ ಮತ್ತೆ ಸೇರಿಸುವ ಬಗ್ಗೆ ಆಂದೋಲನವಾಗಬೇಕು.

ಇದೇ ಸಂದರ್ಭದಲ್ಲಿ ತುಳುವರ ಮತ್ತು ಕೊಡಗರ ಭಾಷೆಯನ್ನು ಸಂವಿಧಾನದ ಎಂಟನೇಯ ಪರಿಚ್ಛೇದದಲ್ಲಿ ಸೇರಿಸುವುದರ ಜೊತೆಗೆ ರಾಜ್ಯದ ಅಧಿಕೃತ ಭಾಷೆಯಾಗಿ ಘೋಷಿಸಬೇಕೆಂಬ ಬೇಡಿಕೆಗೆ ಕನ್ನಡಿಗರೆಲ್ಲರೂ ಸ್ಪಂದಿಸಬೇಕು ಹಾಗೂ ಬೆಂಬಲಿಸಬೇಕು. ಕರ್ನಾಟಕ ಸರಕಾರ ಮತ್ತು ಭಾರತ ಸರಕಾರ ಕೂಡಲೇ ಈ ಭಾಷೆಗಳಿಗೆ ಮಾನ್ಯತೆ ನೀಡಿ ರಾಜ್ಯದ ಅಖಂಡತೆಯನ್ನು ಉಳಿಸಿಕೊಳ್ಳಬೇಕು. ಇಲ್ಲವಾದರೆ ದಾಪುಗಾಲು ಹಾಕಿ ಮುಂದುವರಿಯುತ್ತಿರುವ ಪ್ರತ್ಯೇಕತೆಯ ಸ್ವರೂಪ ಶ್ರೀಘ್ರಗೊಂಡಲ್ಲಿ ಸರಕಾರ ಮತ್ತು ಕನ್ನಡಿಗರು ಇದರ ಜವಾಬ್ದಾರರಾಗುತ್ತಾರೆ.

ಸಂಘದ ಚುನಾವಣಾ ಸಮಯ ಬಂದಾಗ, ತುರ್ತಾಗಿ ಸಂಘದ ನಿಯಮಾವಳಿಗಳ ತಿದ್ದುಪಡಿಯಾಗಿದೆ. ಈ ತಿದ್ದುಪಡಿಯಿಂದ ಸಂಘದ ಆಜೀವ ಸದಸ್ಯರಾಗಬೇಕಾದರೆ ಕನ್ನಡಿಗರು ಮೂರು ವರ್ಷಗಳ ಕಾಲ ಕಾಯಬೇಕಾಗುತ್ತದೆ, ಮಾತ್ರವಲ್ಲ ಮತದಾನದ ಹಕ್ಕಿಗಾಗಿ ನಾಲ್ಕು ವರ್ಷ ಕಾಯಬೇಕಾಗುವುದು. ಇದು ಸಕ್ರಿಯ ಕನ್ನಡಿಗರನ್ನು ಸಂಘದಿಂದ ದೂರವಿಟ್ಟಂತಾಗುವುದು. ಈ ಕುರಿತು ಬಹಳಷ್ಟು ಕನ್ನಡಿಗರು ನಮ್ಮಲ್ಲಿ ಚರ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಕನ್ನಡಿಗನೊಬ್ಬ ಕೂಡಲೇ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯನಾಗುವಂತೆ ಮಾಡಲು ಬೇಕಾದ ಪ್ರಕ್ರಿಯೆಗೆ ಚಾಲನೆ ನೀಡಬೇಕಾಗಿದೆ. ಹಾಗೆಯೇ ಅನೇಕ ಕಾರಣಗಳಿಂದ ಸಂಘದಿಂದ ದೂರವಿರುವ ದೆಹಲಿಯ ಕನ್ನಡಿಗರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಕರೆ ತರುವ, ಹತ್ತಿರವಾಗಿಸುವ ಪ್ರಯತ್ನವನ್ನು ನಾವು ಮಾಡಬೇಕು. ಈ ಅಭಿಯಾನದಲ್ಲಿ ನಿಮ್ಮೆಲ್ಲರ ಸಹಕಾರ ಅತೀ ಅಗತ್ಯ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯ ಹಲವು ವರ್ಷಗಳ ಕಲ್ಪನೆ ಇದೀಗ ಸಾಕಾರಗೊಳ್ಳುತ್ತಿದೆ. ಸೆಪ್ಟಂಬರ್ ತಿಂಗಳಿನಲ್ಲಿ ಇದರ ಉದ್ಘಾಟನೆ ಹಾಗೂ ದೆಹಲಿಯ ಹೆಸರಾಂತ ಕನ್ನಡದ ಚಿತ್ರ ಕಲಾವಿದರ ಕಲಾಕೃತಿಯನ್ನು ಪ್ರದರ್ಶಿಸಲು ಆರ್ಟ್ ಗ್ಯಾಲರಿ, ಸಂಚಾಲಕರಾದ ಶ್ರೀ ಆನಂದ್ ಮುರ್‌ಗೋಡ್ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ಕಲಾವಿದ ಕೆ.ಆರ್.ಸುಬ್ಬಣ್ಣ ಅವರ ಮಾರ್ಗದರ್ಶನದಲ್ಲಿ ಸಜ್ಜುಗೊಳ್ಳುತ್ತಿದೆ. ಶ್ರೀ ಸುಧೀರ್ ಫಡ್ನೀಸ್ ಅವರು ತಮ್ಮ ಹೆಚ್ಚಿನ ಸಮಯವನ್ನು ಈ ಆರ್ಟ್ ಗ್ಯಾಲರಿಯ ಕೆಲಸ ಕಾರ್ಯಗಳಿಗೆ ಮೀಸಲಾಗಿಸಿದ್ದಾರೆ. ಶ್ರೀ ಚೆನ್ನು ಎಸ್. ಮಠದ ಅವರು ಸೂಕ್ತ ಸಲಹೆಗಳನ್ನು ನೀಡುತ್ತಿದ್ದು, ಬೇಕಾದ ಪರಿಕರಗಳನ್ನು ಕ್ಲಪ್ತ ಸಮಯದಲ್ಲಿ ಪೂರೈಸುವಲ್ಲಿ ಶ್ರೀಮತಿ ಆಶಾ ಶ್ಯಾಮ್ ಸುಂದರ್ ಅವರು ಉತ್ಸಾಹದಿಂದ ಶ್ರಮಿಸುತ್ತಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಕಲಾವಿದರಿಂದ ಚಂಢೀಗಡ ಕನ್ನಡ ಸಂಘದಲ್ಲಿ ಸೆಪ್ಟಂಬರ್ 15ರಂದು ಸಂಗೀತ ಮತ್ತು ಭರತ ನಾಟ್ಯ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಸಲು ಪ್ರಯತ್ನಿಸಲಾಗುವುದು. ಸಂಘದ ಕಾರ್ಯಕ್ರಮಗಳ ಮುಂದಿನ ಮೂರು ತಿಂಗಳ ಕಾರ್ಯಯೋಜನೆ ಸಿದ್ಧವಾಗಿದ್ದು, ಅವನ್ನು ಅನುಷ್ಠಾನಗೊಳಿಸಿ ನಿಮಗೆಲ್ಲಾ ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡುವಲ್ಲಿ ನಮ್ಮ ಕಾರ್ಯಕಾರಿ ಸಮಿತಿ ಮತ್ತು ಕಾರ್ಯಕ್ರಮಗಳ ಆಯೋಜನೆಯ ಸಂಚಾಲಕರು ಹಾಗೂ ಸದಸ್ಯರು ಕಾರ್ಯಪ್ರವೃತ್ತರಾಗಿದ್ದಾರೆ.

ಎಲ್ಲರಿಗೂ ಗೌರಿ ಹಬ್ಬ ಮತ್ತು ಗಣೇಶ ಚತುರ್ಥಿಯ ಶುಭಾಶಯಗಳು. ಅ

*ಸಿ.ಎಂ.ನಾಗರಾಜ*
*ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜು: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

DELHI KARNATAKA SANGHA
Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com website : www.delhikarnatakasangha.com



# ಆಮಂತ್ರಣಗಳು

## ಸಾಹಿತ್ಯ ವೈವಿಧ್ಯ ಕಾರ್ಯಕ್ರಮ

*ಭಾನುವಾರ, 22, ಸೆಪ್ಟಂಬರ್ 2013 ರಂದು ಸಾಯಂಕಾಲ 4 ಗಂಟೆಯಿಂದ*

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್**

ಹಳೆಗನ್ನಡ, ಹೊಸಗನ್ನಡ, ಮತ್ತು ಸ್ವರಚಿತ ಕವನಗಳ ವಾಚನ, ಭಾವಗೀತೆ, ಸಾಹಿತ್ಯದ ಕುರಿತ ಸಂವಾದ, ಸಾಹಿತ್ಯ ಪಠ್ಯಗಳ ಓದು, ಕನ್ನಡೇತರ ಕೃತಿಗಳ ಅವಲೋಕನ, ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳು. ದೆಹಲಿ ಪರಿಸರದ ಸಾಹಿತ್ಯಾಸಕ್ತರಿಗೆ ತಮ್ಮ ಸೃಜನಶೀಲತೆಯ ಅಭಿವ್ಯಕ್ತಿಗೊಂದು ಸುಂದರ ಅವಕಾಶ. ಭಾಗವಹಿಸಲಿಚ್ಛಿಸುವವರು ದಯವಿಟ್ಟು ಸಂಘವನ್ನು ಸಂಪರ್ಕಿಸಿರಿ.

## ಕ್ರಿಕೆಟ್ ಪಂದ್ಯಾವಳಿ

ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಅಕ್ಟೋಬರ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಭಾಗವಹಿಸಲಿಚ್ಛಿಸುವ ತಂಡಗಳು ಸೆಪ್ಟಂಬರ್ 25ರೊಳಗಾಗಿ ಪಂದ್ಯಾವಳಿಯ ನಿಯಮಾನುಸಾರ ಸಂಘದ ಕಚೇರಿಯಲ್ಲಿ ತಮ್ಮ ತಂಡದ ಹೆಸರನ್ನು ನೊಂದಾಯಿಸಬೇಕಾಗಿ ಕೇಳಿಕೊಳ್ಳಲಾಗಿದೆ.

## ನಾಟಕ ಸ್ಪರ್ಧೆ

ಏಕಾಂಕ ನಾಟಕ ಸ್ಪರ್ಧೆ–ಉತ್ಸವವನ್ನು ಡಿಸೆಂಬರ್ ತಿಂಗಳಿನಲ್ಲಿ ಆಯೋಜಿಸಲಿದೆ. ನಾಟಕ ಸ್ಪರ್ಧೆ ನಿಯಮಾನುಸಾರ ಭಾಗವಹಿಸಲಿಚ್ಛಿಸುವ ತಂಡಗಳು *ಅಕ್ಟೋಬರ್ 15ರೊಳಗಾಗಿ* ತಮ್ಮ ತಂಡದ ಹೆಸರನ್ನು ಸಂಘದ ಕಚೇರಿಯಲ್ಲಿ ನೊಂದಾಯಿಸಬೇಕಾಗಿ ಕೇಳಿಕೊಳ್ಳಲಾಗಿದೆ.

## ಸಂಗೀತ ತರಬೇತಿ

ಹಿಂದೂಸ್ತಾನಿ ಸಂಗೀತದ ಹಿರಿಯ ಕಲಾವಿದ ಶ್ರೀ ಸೋಮನಾಥ್ ಮರಡೂರ್ ಅವರು ಹಿಂದೂಸ್ತಾನಿ ಸಂಗೀತವನ್ನು *ಪ್ರತೀ ಭಾನುವಾರದಂದು* ಸಂಘದಲ್ಲಿ ಕಲಿಸಲಿದ್ದಾರೆ. ಆಸಕ್ತಿಯುಳ್ಳವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ವಿನಂತಿ.

## ರಂಗಾಸ್ತಕರ ಗಮನಕ್ಕೆ

ರಂಗ ಕಲಾವಿದೆ ಶ್ರೀಮತಿ ಅಕ್ಷತಾ ಗೌಡ ಅವರು ದೆಹಲಿಯ ರಂಗಾಸಕ್ತರಿಗಾಗಿ ಕನ್ನಡ ನಾಟಕವೊಂದನ್ನು ನಿರ್ದೇಶಿಸಲಿದ್ದಾರೆ. ನಾಟಕದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ರಂಗಾಸಕ್ತರು ತಮ್ಮ ಹೆಸರುಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ನೊಂದಾಯಿಸಬಹುದು. *ಸೆಪ್ಟಂಬರ್ 22, 2013ರಂದು ಬೆಳಿಗ್ಗೆ 11 ಗಂಟೆಗೆ* ಸಂಘದಲ್ಲಿ ಹಾಜರಿರಬೇಕು.

## ತಬಲ ತರಬೇತಿ

ಸಂಘದಲ್ಲಿ *ಪ್ರತಿ ಶನಿವಾರ ಮತ್ತು ಭಾನುವಾರದಂದು* ಶ್ರೀ ಸುಧೀರ್ ಪಡ್ನೀಸ್ ಅವರು ತಬಲಾ ಬಾರಿಸುವುದನ್ನು ಕಲಿಸುವರು. ಕಲಿಯಸಲಿಚ್ಛಿಸುವರು ಸಂಘದ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು.

## ಸಂಗೀತ ಕಾರ್ಯಕ್ರಮ



**ಪಂಡಿತ ಬಿ.ಎಸ್.ಮಠ ಮತ್ತು ವಿದೂಷಿ ಅಕ್ಕಮಹಾದೇವಿ ಮಠ, ಧಾರವಾಡ ಅವರಿಂದ**

### ವಯಲಿನ್ ವಾದನ

*ಭಾನುವಾರ, 29 ಸೆಪ್ಟಂಬರ್ 2013 ರಂದು ಸಾಯಂಕಾಲ 5 ಗಂಟೆಯಿಂದ*

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**

ಪಂಡಿತ್ ಬಿ.ಎಸ್.ಮಠ ಅವರು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಸಂಗೀತ ಪರಂಪರೆಯಿಂದ ಬಂದ ಹೆಸರಾಂತ ವಯಲಿನ್ ಕಲಾವಿದರು. ಇವರು ಕಿರಾಣ ಘರಾಣಾದಲ್ಲಿ ಪರಿಣತರು. ಕರ್ನಾಟಕದ ಚಿತ್ರಗಿಯ ಸಂಗೀತ ಕುಟುಂಬಕ್ಕೆ ಸೇರಿದವರು. ದಿ.ಪಂ.ಪುಟ್ಟರಾಜ್ ಗವಾಯಿ ಅವರಲ್ಲಿ ನಾಲ್ಕು ವರ್ಷಗಳ ಕಾಲ ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ಕಲಿತಿದ್ದಾರೆ. ಧಾರವಾಡ ಹಾಗೂ ಗೋವಾ ಆಕಾಶವಾಣಿಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ದೇಶ ವಿದೇಶಗಳಲ್ಲಿ ಈಗಾಗಲೇ ಹಲವಾರು ಸಂಗೀತ ಕಛೇರಿಗಳನ್ನು ನೀಡಿದ್ದಾರೆ. ಕರ್ನಾಟಕ ಸಂಗೀತ ನಾಟಕ ಅಕಾಡೆಮಿ 'ಕಲಾಶ್ರೀ' ಪ್ರಶಸ್ತಿಯನ್ನು ನೀಡಿ ಅವರನ್ನು ಗೌರವಿಸಿದೆ. ಪ್ರಸ್ತುತ ಇವರು ಧಾರವಾಡದ ಗಾನಯೋಗಿ ಪಂಚಾಕ್ಷರಿ ಗವಾಯಿ ಸಂಗೀತ ಸಭಾದ ಅಧ್ಯಕ್ಷರು.

ವಿದೂಷಿ ಅಕ್ಕಮಹಾದೇವಿ ಮಠ : ಧಾರವಾಡದ ಸಂಗೀತ ಕುಟುಂಬದಲ್ಲಿ ಜನಿಸಿದ ಅಕ್ಕಮಹಾದೇವಿ ಮಠ ಅವರು ತಮ್ಮ ತಂದೆ ತಬಲಾ ವಾದಕ ದಿ. ಪಂ. ಗದಗಯ್ಯ ಎಸ್.ಹಿರೇಮಠ ಅವರಿಂದ ಸಂಗೀತ ಕಲಿಯುವಲ್ಲಿ ಪ್ರೇರಣೆ ಪಡೆದವರು ನಂತರದ ದಿನಗಳಲ್ಲಿ ಪಂ. ಬಿ.ಎಸ್.ಮಠ ಅವರಿಂದ ವಯಲಿನ್ ತರಬೇತಿ ಪಡೆದು ಅನೇಕ ಕಡೆ ತಮ್ಮ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಪಣಜಿಯ ಆಕಾಶವಾಣಿಯಲ್ಲಿ ಕಲಾವಿದೆಯಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕದ ಹಾಗೂ ಗೋವಾದ ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕರ್ನಾಟಕ ನೃತ್ಯ ಅಕಾಡೆಮಿಯಿಂದ 2007–08ರಲ್ಲಿ ಪುರಸ್ಕಾರ ಲಭಿಸಿದೆ.

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ
*ಭಾನುವಾರ, 15 ಸೆಪ್ಟಂಬರ 2013 ರಂದು ಸಾಯಂಕಾಲ 4 ಗಂಟೆಯಿಂದ*

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ
*ಭಾನುವಾರ, 29 ಸೆಪ್ಟಂಬರ 2013 ರಂದು ಸಾಯಂಕಾಲ 4 ಗಂಟೆಯಿಂದ*



## ಗಣೇಶೋತ್ಸವ ಕಾರ್ಯಕ್ರಮಗಳು

**ಗುರ್‌ಗಾಂವ್ ಕನ್ನಡ ಸಂಘದ 15 ನೇ ವರ್ಷದ ಶ್ರೀ ಗಣೇಶೋತ್ಸವ ಆಚರಣೆ**

*9 ರಿಂದ 15 ಸೆಪ್ಟಂಬರ್ 2013 ವರೆಗೆ*

ಸ್ಥಳ: ಶ್ರೀ ರಾಧಾಕೃಷ್ಣ ಮಂದಿರ, ನ್ಯೂ ಕಾಲೋನಿ, ಗುರ್‌ಗಾಂವ್

**ಹೆಚ್ಚಿನ ವಿವರಗಳಿಗೆ:**
ಅಧ್ಯಕ್ಷರು– ಆನಂದ್ ಶಂಕರ್ (9958113389)
ಕಾರ್ಯದರ್ಶಿ– ಈಶ್ವರಲಿಂಗ ಅರೇರಾ (9891910460)

**ಜನಕಪುರಿ ಕನ್ನಡ ಕೂಟದ ಗಣೇಶೋತ್ಸವ ಕಾರ್ಯಕ್ರಮ**

*15 ಸೆಪ್ಟಂಬರ್ 2013ರಂದು ಬೆಳಿಗ್ಗೆ 10 ಗಂಟೆಗೆ*

ಸ್ಥಳ: 'ಸಿ' 3, ರಾಮ ಮಂದಿರ, ಜನಕಪುರಿ, ನವದೆಹಲಿ

**ಹೆಚ್ಚಿನ ವಿವರಗಳಿಗೆ:**
ಅಧ್ಯಕ್ಷರು– ಶ್ರೀ ಬಿ.ಕೆ. ಬಸವರಾಜು (9810391608),
ಕಾರ್ಯದರ್ಶಿ– ಶ್ರೀ ಎನ್. ಪ್ರಕಾಶ್ (9871800309)

ಸಂಘದಿಂದ ಗೌರವಾರ್ಪಣೆ

# "ಕನ್ನಡಕ್ಕೆ ಗೌರವ ತಂದ ಸಾರಸ್ವತ ಲೋಕ"

## -ಜಿ. ವೆಂಕಟಸುಬ್ಬಯ್ಯ



ಬೆಂಗಳೂರಿನಲ್ಲಿ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರನ್ನು ದೆಹಲಿ ಕರ್ನಾಟಕ ಸಂಘವು ಗೌರವಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ಅಲ್ಲಿ ನೆಲೆಸಿದ ಸಂಘದ ಅನೇಕ ಸದಸ್ಯರು ಸಹಕರಿಸಿದರು.

**ಟಿ.ಎಸ್. ರಮೇಶ್** ಮತ್ತು **ನಾರಾಯಣ ಸ್ವಾಮಿ** ಅವರಿಂದ ಅಭಿಮತಕ್ಕಾಗಿ ವಿಶೇಷ ವರದಿ. ಫೋಟೋಗಳು **ವೀರೇಶ್ ಹೊಗೆಸೊಪ್ಪಿನವರ್**



ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಬಗೆಗಿನ ನಿರ್ಲಕ್ಷ್ಯವನ್ನು ತೊಡೆದುಹಾಕಿ ಗೌರವ ತಂದು ಕೊಟ್ಟದ್ದು ಸಾರಸ್ವತ ಲೋಕ ಎಂದು ಶತಾಯುಷಿ, ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಹೇಳಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಸದಸ್ಯರು ಬೆಂಗಳೂರಿನಲ್ಲಿ ಆಗಸ್ಟ್ 11 ರಂದು ನೀಡಿದ ಗೌರವವನ್ನು ಸ್ವೀಕರಿಸಿದ ಅವರು, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ತಾವು ದೆಹಲಿಯಲ್ಲಿದ್ದ ಸಮಯವನ್ನು ಸ್ಮರಿಸುತ್ತಾ, ಹಿಂದೆ ದಕ್ಷಿಣ ಭಾರತದ ಭಾಷೆಗಳೆಂದರೆ ಕೇವಲ ತಮಿಳು-ತೆಲುಗು ಎಂದು ಭಾವನೆ ಇತ್ತು. ಕನ್ನಡದ ಬಗ್ಗೆ ತೀರಾ ನಿರ್ಲಕ್ಷ್ಯವಿತ್ತು ಎಂದರು.

ಕರ್ನಾಟಕದಿಂದ ಆಯ್ಕೆಯಾದ ಸಂಸದರು ಕೂಡ ಕನ್ನಡಕ್ಕೆ ಗೌರವ ತಂದುಕೊಡುವ ಕೆಲಸ ಮಾಡಬೇಕಾಗಿತ್ತು ಎಂದ ಅವರು ಅದು ಆಗಲಿಲ್ಲ ಎಂದು ಬೇಸರ ಪಟ್ಟರು. ಆದರೀಗ ಕನ್ನಡ ಸಾರಸ್ವತ ಲೋಕಕ್ಕೆ ಎಂಟು ಜ್ಞಾನಪೀಠ ಪುರಸ್ಕಾರ ಸಂದ ನಂತರ ಕನ್ನಡ ಭಾಷೆಗೆ ಗೌರವ ಸಿಗುತ್ತಿದೆ. ಈ ದಿಸೆಯಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ಹಿಂದಿನ ಕನ್ನಡ ಭಾರತಿ ಸಂಘಟನೆಗಳು ಅಪಾರ ಕೊಡುಗೆ ನೀಡಿವೆ ಎಂದು ಶ್ಲಾಘಿಸಿದರು.

ತಮಗೆ ಕನ್ನಡ ಸಾಹಿತ್ಯವನ್ನು ಪರಿಚಯಿಸಿದ ಗುರು ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ಅವರನ್ನು ಸ್ಮರಿಸಿದ ಪ್ರೊ. ವೆಂಕಟಸುಬ್ಬಯ್ಯ ಅವರು ಕನ್ನಡದಲ್ಲಿ ರಚನೆಯಾಗಿರುವ ನಿಘಂಟುಗಳು ಉತ್ಕೃಷ್ಟವಾಗಿದ್ದು ಇತರ ಯಾವುದೇ ಭಾರತೀಯ ಭಾಷೆಗಳಲ್ಲಿ ಇಂತಹ ಗುಣಮಟ್ಟದ ಕಾರ್ಯ ಆಗಿಲ್ಲ ಎಂದರು.

ಸ್ವಾತಂತ್ರ್ಯಾ ನಂತರ ಭವ್ಯ ಭಾರತದ ಕನಸು ಕಂಡಿದ್ದ ತಮಗೆ ಪ್ರಸ್ತುತ ನಡೆಯುತ್ತಿರುವ ಅತ್ಯಾಚಾರ, ದರೋಡೆ, ಆತ್ಮಹತ್ಯೆ ಮುಂತಾದ ಪ್ರಕರಣಗಳು ಆತಂಕ ಮೂಡಿಸಿವೆ, ಶಾಂತ ಮತ್ತು ಉತ್ತಮ ಪರಿಸರ ಇರುವ ಬೆಂಗಳೂರಿನಲ್ಲಿ ಆತ್ಮಹತ್ಯೆ ಮತ್ತು ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ಶಾಲೆಯ ನಿವೃತ್ತ ಕನ್ನಡ ಪ್ರಾಧ್ಯಾಪಕ ಶ್ರೀ ಎಸ್.ಎನ್. ರಾಜು, ಸಂಘದ ಮಾಜಿ ಖಜಾಂಚಿ ಶ್ರೀ ಬಿ.ಪಿ. ಉತ್ತಪ್ಪ, ಸಂಘದ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಪ್ರಭಾಮೂರ್ತಿ, ಕರ್ಣಾಟಕ ಬ್ಯಾಂಕಿನ ಶ್ರೀ ಕುಮಾರಸ್ವಾಮಿ, ಸದಸ್ಯೆ ಶ್ರೀಮತಿ ರಾಧಿಕಾ ರಾವ್ ಅವರು ಪ್ರೊ. ವೆಂಕಟಸುಬ್ಬಯ್ಯ ಅವರನ್ನು ಸನ್ಮಾನಿಸಿದರು.

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರೊ. ವೆಂಕಟಸುಬ್ಬಯ್ಯ ಅವರ ನಿವಾಸದ ಸಮೀಪ ಇರುವ ಹಾಗೂ ಅವರ ಬರವಣಿಗೆಗೆ ಸ್ಫೂರ್ತಿದಾಯಕವಾಗಿರುವ ಜಯನಗರ 31ನೇ ಅಡ್ಡರಸ್ತೆಯ ಉದ್ಯಾನವನದ ಮಂಟಪಕ್ಕೆ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಹೆಸರಿಡಬೇಕು ಎಂದು ಆಗ್ರಹಿಸಿದರು. ದೆಹಲಿಯಲ್ಲಿದ್ದು ಈಗ ಬೆಂಗಳೂರು ನಿವಾಸಿಗಳಾಗಿರುವ ದೆಹಲಿ ಕರ್ನಾಟಕ ಸಂಘದ ಸದಸ್ಯರನ್ನು ಸಂಘಟಿಸಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಅವರು ವಿವರ ನೀಡಿದರು.

ಕನ್ನಡ ಭಾರತಿಯ ನಿಕಟ ಸಂಪರ್ಕ ಹೊಂದಿದ್ದ ಹಿರಿಯ ಕನ್ನಡಿಗ ಶ್ರೀ ಎಂ.ವಿ. ನಾರಾಯಣ ರಾವ್ ಅವರು ಸುಮಾರು 35 ವರ್ಷಗಳ ತಮ್ಮ ದೆಹಲಿ ವಾಸ ಹಾಗೂ ಪ್ರೊ. ವೆಂಕಟಸುಬ್ಬಯ್ಯ ಅವರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡರು.

ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಹಾಗೂ ಸಂಘದ ಸದಸ್ಯ ಶ್ರೀ ಶ್ರೀನಿವಾಸ ಕಪ್ಪಣ್ಣ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಪ್ರತಿ ಮುಂಜಾನೆ ಪ್ರೊ. ವೆಂಕಟಸುಬ್ಬಯ್ಯ ಅವರು ವಾಕಿಂಗ್ ಮಾಡುವ ಉದ್ಯಾನದಲ್ಲಿ, ಅವರು ಸ್ನೇಹಿತರೊಂದಿಗೆ ಕುಳಿತು ಸಾಹಿತ್ಯಿಕ ಹರಟೆ ಮಾಡುವ ಸುಂದರ ಮಂಟಪದಲ್ಲಿ ರಾಷ್ಟ್ರ ರಾಜಧಾನಿಯಿಂದ ಆಗಮಿಸಿ ಕಾರ್ಯಕ್ರಮವನ್ನು ಆಯೋಜಿಸಿ, ಪ್ರೊ. ವೆಂಕಟಸುಬ್ಬಯ್ಯ ಅವರನ್ನು ಸನ್ಮಾನಿಸುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಶ್ರೀ ಲಕ್ಷ್ಮೀನಾರಾಯಣ ಹೆಗಡೆ ಕಾರ್ಯಕ್ರಮ ನಿರ್ವಹಣೆ ಮಾಡಿದರು. ದೆಹಲಿ ಕರ್ನಾಟಕ ಸಂಘದ ಒಡನಾಟದಲ್ಲಿದ್ದ ಶ್ರೀ ಎಸ್.ಎನ್. ಚಂದ್ರಶೇಖರ್, ಶ್ರೀ ನಾರಾಯಣ ಜೋಯ್ಸ್, ಶ್ರೀ ಎಂ.ಕೆ. ಮುದ್ದಪ್ಪ, ಶ್ರೀ ಶ್ರೀನಿವಾಸ ವೈದ್ಯ, ಶ್ರೀ ನರಹರಿ ರಾವ್, ಶ್ರೀ ಸುಂದರ ಮೂರ್ತಿ, ಶ್ರೀ ಪ್ರದೀಪ್ ಕುಮಾರ್, ಶ್ರೀ ವೀರೇಂದ್ರ ಶೆಟ್ಟಿ ಮೊದಲಾದ ಅನೇಕ ಹಿರಿಯ ಕಿರಿಯ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಅ

# ನೂರರ ಸಂಭ್ರಮದಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯ

ಆಗಸ್ಟ್ 23ಕ್ಕೆ ನೂರು ವರ್ಷ ತುಂಬಿದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಮಾನಸಿಕವಾಗಿ ವಯೋವೃದ್ಧರಾದವರಂತೆ ಕಾಣಿಸುತ್ತಿಲ್ಲ. ಅವರ ಜ್ಞಾಪಕ ಶಕ್ತಿ, ಓದುವ ಆಸಕ್ತಿ ಮುಖ್ಯವಾಗಿ ಕನ್ನಡ ಪದಗಳ ಅರ್ಥಗಳನ್ನು ವ್ಯಾಖ್ಯಾನಿಸುವ ಒಲವು ಅವರನ್ನು ಭೇಟಿಯಾದವರಿಗೆ ಬೆರಗು ಮೂಡಿಸುತ್ತದೆ. ಅವರು ವೃತ್ತಿಯಿಂದ ನಿವೃತ್ತಿಯಾಗಿ ನಾಲ್ಕು ದಶಕಗಳು ಸಂದಿವೆ. ಇಂದಿಗೂ ಅವರ ಮನಸ್ಸಿನಲ್ಲಿ ಹೊಸ ಪುಸ್ತಕಗಳ ಬಗ್ಗೆ ಚಿಂತನೆ ನಡೆಯುತ್ತಲೇ ಇದೆ. ಭಾಷೆಯೆಂಬುದು ನಿರಂತರವಾಗಿ ಬೆಳೆಯಬೇಕಾದರೆ ಇತರ ಭಾಷೆಗಳ ಪದಗಳು ಹಾಗೂ ನಮ್ಮದೇ ಭಾಷೆಯ ದೇಶೀಯ ಪದಗಳು ಅದರಲ್ಲಿ ಸೇರಬೇಕೆಂಬುದು ಅವರ ನಿಲುವು. ಪ್ರಾದೇಶಿಕ ಭಾಷಾ ಪದಗಳನ್ನು ಅವುಗಳ ಮೂಲಗಳಿಂದ ಹುಡುಕಿ ಅವುಗಳನ್ನು ನಮ್ಮ ಪದ ಸಂಪತ್ತಿಗೆ ಸೇರಿಸಬೇಕಾದುದು ನಮ್ಮ ಕರ್ತವ್ಯ ಎಂದು ಅವರು ನಮ್ಮನ್ನು ಹುರಿದುಂಬಿಸುತ್ತಾರೆ.

ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಕನ್ನಡ–ಕನ್ನಡ ಇಂಗ್ಲೀಷ್ ನಿಘಂಟು, ಕನ್ನಡ–ಕನ್ನಡ ಕ್ಲಿಷ್ಟ ಪದಕೋಶ, ಇಂಗ್ಲೀಷ್–ಕನ್ನಡ ನಿಘಂಟುಗಳು ಅವರು ಕನ್ನಡ ಭಾಷಾಲೋಕಕ್ಕೆ ನೀಡಿದ ಅಮೂಲ್ಯವಾದ ಕೊಡುಗೆಗಳಾಗಿವೆ. ಪ್ರಜಾವಾಣಿ ಪತ್ರಿಕೆಯಲ್ಲಿ ಹದಿನೆಂಟು ವರ್ಷಗಳ ಕಾಲ 'ಇಗೋ ಕನ್ನಡ' ಎಂಬ ಸರಣಿಯ ಮೂಲಕ ಕನ್ನಡದ ಅಪರೂಪದ ಪದಗಳನ್ನು ಪರಿಚಯಿಸಿದ ಕೀರ್ತಿ ಅವರದು. ನಯಸೇನ, ಅನುಕಲ್ಪನೆ ಅವರು ಬರೆದ ವಿಮರ್ಶಾ ಕೃತಿಗಳು. ಅವರ ಕೃತಿಗಳು ಅವುಗಳ ವಿಷಯ ಜ್ಞಾನಕ್ಕಾಗಿ ಪ್ರಮುಖವಾಗುತ್ತವೆ. ಮುದ್ದಣ ಪದಪ್ರಯೋಗಕೋಶ, ಎರವಲು ಪದಕೋಶ, ಕುಮಾರವ್ಯಾಸನ ಅಂತರಂಗ, ಮುದ್ದಣ ಭಂಡಾರದ ಎರಡು ಭಾಗಗಳು, ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ, ದಾಸಸಾಹಿತ್ಯ, ವಚನಸಾಹಿತ್ಯ, ಶಾಸನ ಸಾಹಿತ್ಯ ಮುಂತಾದುವು ಶಿಕ್ಷಣ, ಸಂಶೋಧನೆ, ಅನುವಾದ, ವಿಮರ್ಶೆಗೆ ಸಂಬಂಧಿಸಿದ ಪುಸ್ತಕಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ಪರಿಷತ್ತಿನ ಮೂಲ ಸಂವಿಧಾನವನ್ನು ರಚಿಸಿ ಸಂಸ್ಥೆಗೆ ತಾತ್ವಿಕ ನೆಲೆಗಟ್ಟನ್ನು ಒದಗಿಸಿದವರಲ್ಲಿ ಪ್ರೊ. ವೆಂಕಟಸುಬ್ಬಯ್ಯ ಪ್ರಮುಖರು. ಪರಿಷತ್ತಿನ ಬೃಹತ್ ನಿಘಂಟಿನ ಪ್ರಧಾನ ಸಂಪಾದಕರಾಗಿ ವಿವಿಧ ಸಂಪುಟಗಳನ್ನು ಅವರು ಪ್ರಕಟಪಡಿಸಿದ್ದಾರೆ. ಕಳೆದ ವರ್ಷ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆವಹಿಸಿ ಭಾಷೆಗೊಂದು ಹೊಸ ದಿಕ್ಕನ್ನು ನೀಡುವಂತಹ ಮಾತನ್ನು ಆಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ





ಉಪನ್ಯಾಸಕರಾಗಿ ನೇಮಕಗೊಂಡ ಅವರು ನಂತರ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ನಾಲ್ಕು ದಶಕಗಳವರೆಗೆ ವಿದ್ಯಾರ್ಥಿಗಳ ಜ್ಞಾನಪರಿಧಿ ಹೆಚ್ಚಿಸಲು ಶ್ರಮಿಸಿ 1973 ರಲ್ಲಿ ನಿವೃತ್ತರಾದರು. ಅವರು ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಮತ್ತು ಕನ್ನಡ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಾಂ ಗ್ರಾಮದ ತಿಮ್ಮಣ್ಣಯ್ಯ–ಸುಬ್ಬಮ್ಮ ದಂಪತಿಗಳ ಜೇಷ್ಠಪುತ್ರರಾದ ಪ್ರೊ. ವೆಂಕಟಸುಬ್ಬಯ್ಯ ಅವರು 1937 ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿಯನ್ನು ಸುವರ್ಣ ಪದಕದೊಂದಿಗೆ ಪಡೆದಿದ್ದರು. ಅವರ ತಂದೆ ಗಂಜಾಂ ತಿಮ್ಮಣ್ಣಯ್ಯನವರು ವೇದ ಉಪನಿಷತ್ತುಗಳಲ್ಲಿ ಪಾರಂಗತರಾಗಿದ್ದು ವೆಂಕಟಸುಬ್ಬಯ್ಯನವರಿಗೆ ಕನ್ನಡ ಭಾಷೆಯ ಕುರಿತು ಆಸಕ್ತಿ ಬರಲು ಪ್ರೇರಣೆ ನೀಡಿದ್ದರು.

ಭಾಷಾ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ತರ ಕಾರ್ಯ ಮಾಡಿದ ಪ್ರೊ. ವೆಂಕಟಸುಬ್ಬಯ್ಯ ಅವರು ಇನ್ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್ ಸಂಸ್ಥೆಯ ಬೃಹತ್ ಯೋಜನೆಯಾಗಿದ್ದ ಜಪಾನಿ, ಕನ್ನಡ, ಆಂಗ್ಲ ಮತ್ತು ತಮಿಳು ಭಾಷೆಯ ನಿಘಂಟು ರಚಿಸುವ ಸಮಿತಿಗೆ ಸಲಹೆಗಾರರಾಗಿದ್ದರು. ಆಂಧ್ರ ಪ್ರದೇಶ ಸರಕಾರದ ನಿಘಂಟು ಯೋಜನೆಗೂ ಸಲಹಾಸಮಿತಿ ಸದಸ್ಯರಾಗಿದ್ದರು. ಅಖಿಲ ಭಾರತ ನಿಘಂಟುಕಾರರ ಸಂಘದ ಉಪಾಧ್ಯಕ್ಷರಾಗಿ, ಕೇಂದ್ರ ಸರ್ಕಾರದ ಭಾರತೀಯ ಭಾಷಾ ಸಮಿತಿಯ ಕನ್ನಡ ಪ್ರತಿನಿಧಿಯಾಗಿಯೂ ಅವರು ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

ಪ್ರೊ. ವೆಂಕಟಸುಬ್ಬಯ್ಯ ಅವರ ಇಂಗ್ಲೀಷ್–ಕನ್ನಡ ನಿಘಂಟು ಮತ್ತು ಕನ್ನಡ–ಕನ್ನಡ ಕ್ಲಿಷ್ಟ ಪದಕೋಶಗಳು ಆಧುನಿಕ ಓದುಗರಿಗೆ ಮತ್ತು ಕನ್ನಡ ಭಾಷಾ ಆಸಕ್ತರಿಗೆ 'ಬರಹ' ಅಂತರ್ಜಾಲದಲ್ಲಿ ಲಭ್ಯವಿದೆ. ಕನ್ನಡ ಪದಗಳ ಸರಿಯಾದ ಅರ್ಥ, ಇಂಗ್ಲಿಷ್ ಪದಗಳಿಗೆ ಸರಿಯಾದ ಕನ್ನಡ ಪದಗಳು ಮತ್ತು ಅವುಗಳ ಸರಿಯಾದ ಪ್ರಯೋಗಗಳನ್ನು ಮಾಡಲು ಒಂದು ಕೈಪಿಡಿಯಾಗಿ ಅಂತರ್ಜಾಲದಲ್ಲಿ ಉಪಯೋಗಿಸಬಹುದು.

ಇಂತಹ ಮಹಾನ್ ವಿದ್ವಾಂಸರ ಬದುಕು ಮತ್ತು ಕೃತಿಗಳ ಅಧ್ಯಯನದಿಂದ ಅವರನ್ನು ನಮ್ಮ ಸಂಸ್ಕೃತಿಯ ಪ್ರಮುಖ ಅಂಗವಾಗಿ ಮುಂದಿನ ತಲೆಮಾರುಗಳ ವರೆಗೆ ಉಳಿಸಬಹುದು. ಅ

**ಅಭಿಮತ ವರದಿ**

**ಪ್ರೊ. ವೆಂಕಟಸುಬ್ಬಯ್ಯ ಅವರ ಕೆಲವು ಪ್ರಮುಖ ಕೃತಿಗಳು**

ನಯನಸೇನ, ಅನುಕಲ್ಪನೆ, ನಳಚಂಪು, ಅಕ್ರೂರ ಚರಿತ್ರೆ, ಲಿಂಡನ್ ಜಾನ್ಸನ್ ಕಥೆ, ಸಂಯುಕ್ತ ಸಂಸ್ಥಾನ ಪರಿಚಯ, ಶಂಕರಾಚಾರ್ಯ, ಕಬೀರ್, ಇದು ನಮ್ಮ ಭಾರತ, ಸರಳಾದಾಸ್, ರತ್ನಾಕರವರ್ಣಿ, ದಾಸ ಸಾಹಿತ್ಯ, ವಚನ ಸಾಹಿತ್ಯ, ಶಾಸನ ಸಾಹಿತ್ಯ, ಷಡಕ್ಷರ ದೇವ, ಸರ್ವಜ್ಞ, ಕನ್ನಡ–ಕನ್ನಡ ಇಂಗ್ಲೀಷ್ ನಿಘಂಟು, ಕನ್ನಡ–ಕನ್ನಡ ಕ್ಲಿಷ್ಟ ಪದಕೋಶ, ಇಂಗ್ಲೀಷ್–ಕನ್ನಡ ನಿಘಂಟು, ಹೊಯ್ಸಳ ಕರ್ನಾಟಕ ರಜತೋತ್ಸವ ಸಂಪುಟ, ಮುದ್ದಣ ಭಂಡಾರ ಭಾಗ–1, ಮುದ್ದಣ ಭಂಡಾರ ಭಾಗ–2, ಕಾವ್ಯಲಹರಿ, ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ, ಕನ್ನಡವನ್ನು ಉಳಿಸಿ ಬೆಳೆಸಿದವರು, ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಕವಿ ಜನ್ನ, ಡಿ.ವಿ.ಗುಂಡಪ್ಪ, ಕನ್ನಡದ ನಾಯಕಮಣಿಗಳು, ಕರ್ಣಕರ್ಣಾಮೃತ, ನಾಗರಸನ ಭಗವದ್ಗೀತೆ, ತಮಿಳು ಕತೆಗಳು, ಇಗೋ ಕನ್ನಡ–1, ಇಗೋ ಕನ್ನಡ–2, ಮುದ್ದಣ ಪದಪ್ರಯೋಗಕೋಶ, ಎರವಲು ಪದಕೋಶ, ಕುಮಾರವ್ಯಾಸನ ಅಂತರಂಗ, ಕನ್ನಡ ಶಾಸನ ಪರಿಚಯ, ಭಾಷಾಂತರ ಪಾಠಗಳು, ಕಾಲೇಜು ಭಾಷಾಂತರ, ಮುಂತಾದವು ಇವರ ಪ್ರಮುಖ ಕೃತಿಗಳು.

# ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಖಂಡ ಭಾರತದ ಒಗ್ಗಟ್ಟಿಗೆ ಕರೆ



ದೇಶದ ಭದ್ರತೆಯ ದೃಷ್ಟಿಯಿಂದ ಭಾರತವು ಅಖಂಡವಾಗಿ ಉಳಿಯಬೇಕು. ರಾಜಕೀಯ ಸ್ವಾರ್ಥಕ್ಕಾಗಿ ದೇಶವನ್ನು ಚಿಕ್ಕ ರಾಜ್ಯಗಳಾಗಿ ಮಾಡುವುದು ಸರಿಯಲ್ಲ ಎಂದು ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿರುವ ಶ್ರೀ ರಾಮಾ ಜೋಯಿಸ್ ಅವರು ಅಭಿಪ್ರಾಯಪಟ್ಟರು. ಅವರು ದೆಹಲಿ ಕರ್ನಾಟಕ ಸಂಘದಲ್ಲಿ 67ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭ ಧ್ವಜಾರೋಹಣ ಮಾಡಿ ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ಬಂದು 67 ವರ್ಷಗಳಾಗಿದ್ದು, ಮಹಾತ್ಮ ಗಾಂಧೀಜಿಯವರ 1942ರ ಕ್ವಿಟ್ ಇಂಡಿಯಾ ಚಳವಳಿಯ ಐದು ವರ್ಷಗಳ ನಂತರ ಸ್ವಾತಂತ್ರ್ಯ ಪಡೆದ ಭಾರತವು ಇಂದು ಚಿಕ್ಕ ರಾಜ್ಯಗಳಾಗಿ ವಿಭಜನೆಗೊಳ್ಳುತ್ತಾ 'ಸ್ಪ್ಲಿಟ್ ಇಂಡಿಯಾ' ಆಗಿದೆ ಎಂದು ಅವರು ವಿಷಾದ ವ್ಯಕ್ತ ಪಡಿಸಿದರು. ಶ್ರೀ ರಾಮಾ ಜೋಯಿಸ್ ಅವರು ಇಂದು ಅಖಂಡ ಭಾರತದ ಒಗ್ಗಟ್ಟಿಗೆ ನಾವೆಲ್ಲ ಶ್ರಮಿಸಬೇಕಾಗಿದೆ ಎಂದು ಕರೆ ಇತ್ತರು. ಧ್ವಜಾರೋಹಣದ ನಂತರ ದೇಶಭಕ್ತಿಗೀತೆಗಳ ಕಾರ್ಯಕ್ರಮ ನಡೆಯಿತು.



ಆರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡಿದರು. ಕಾರ್ಯಕ್ರಮದಲ್ಲಿ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಎಂ., ಜಂಟೀ ಕಾರ್ಯದರ್ಶಿಗಳಾದ ಶ್ರೀಮತಿ ಎಸ್.ಸಿ.ಹೇಮಲತಾ, ಶ್ರೀ ಟಿ.ಎಂ. ಮೈಲಾರಪ್ಪ, ಸಮಿತಿ ಸದಸ್ಯರುಗಳಾದ ಶ್ರೀ ಪಿ.ಸಿ. ಶ್ರೀನಿವಾಸ್, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ವಿ.ವಿ. ಬಿರಾದಾರ, ಶ್ರೀ ಆನಂದ್ ಮುರಗೋಡ, ಶ್ರೀಮತಿ ಪೂರ್ಣಿಮಾ ಗೌಡ, ಶ್ರೀಮತಿ ಆಶಾ ಶ್ಯಾಮ್‌ಸುಂದರ್, ಶ್ರೀ ರಾಧಾಕೃಷ್ಣ, ಶ್ರೀಮತಿ ಕುಸುಮಾ ಪಿ. ನಂದರಗಿ ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು. ಅ

*ಪೂರ್ಣಿಮಾ ಗೌಡ*

---



# ಕರ್ನಾಟಕಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆ

ದೆಹಲಿಯ ಕರ್ನಾಟಕ ಭವನದಲ್ಲಿ ನಿವಾಸೀ ಆಯುಕ್ತರಾದ ಶ್ರೀಮತಿ ವಂದನಾ ಗುರ್‌ನಾನಿ ಅವರು ಸ್ವಾತಂತ್ರ್ಯೋತ್ಸವ ದಿನದಂದು ಕರ್ನಾಟಕ ಭವನದಲ್ಲಿ ಧ್ವಜಾರೋಹಣೆ ಮಾಡಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಭವನದ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.



# ದೆಹಲಿಯ ಇನ್ನಷ್ಟು ಕನ್ನಡಿಗರನ್ನು ಸಂಘದ ಜತೆ ಸೇರಿಸಲು ಬಸವಪ್ರಭು ಎಸ್. ಪಾಟೀಲ್ ಕರೆ

ದೆಹಲಿಯ ಬಹಳಷ್ಟು ಕನ್ನಡಿಗರು ದೆಹಲಿ ಕರ್ನಾಟಕ ಸಂಘದ ಸಂಪರ್ಕಕ್ಕೆ ಬಾರದೇ ತಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಜೀವಂತವಾಗಿರಿಸುವಲ್ಲಿ ವಿಫಲರಾಗಿದ್ದಾರೆ. ಅಂತಹ ಕನ್ನಡಿಗರನ್ನು ಗುರುತಿಸಿ ಸಂಘದ ಸಂಪರ್ಕಕ್ಕೆ ತಂದು ಸಂಘವನ್ನು ಇನ್ನಷ್ಟು ಬಲಪಡಿಸಬೇಕು ಎಂದು ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಬಸವಪ್ರಭು ಎಸ್. ಪಾಟೀಲ್ ಅವರು ಅಭಿಪ್ರಾಯಪಟ್ಟರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ 15ರಂದು ನಡೆದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು. ತನ್ನ ಪರಿಚಯದವರೇ ಬಹಳಷ್ಟು ಮಂದಿ ಸಂಘದಿಂದ ದೂರವಿದ್ದಾರೆ ಎಂದ ಅವರು, ವಿವಿಧ ವೃತ್ತಿ ನಿಪುಣರನ್ನು ಸಂಘಟಿಸಿ, ಅವರ ಕಾರ್ಯ ನೈಪುಣ್ಯತೆಗಳ ಪ್ರಯೋಜನವನ್ನು ದೆಹಲಿಯಲ್ಲಿರುವ ಕನ್ನಡಿಗರು ಪಡೆಯುವಂತೆ ಸಂಘವು ಪ್ರಯತ್ನಿಸಬೇಕು ಎಂಬ ಕಿವಿಮಾತನ್ನು ಹೇಳಿದರು. ಸಂಘವು ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳಲ್ಲಿ ದೆಹಲಿಯ ಹೆಚ್ಚು ಹೆಚ್ಚು ಕನ್ನಡಿಗರು ಪಾಲ್ಗೊಂಡು ಸಂಘವನ್ನು ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ಬೆಳೆಸುವಲ್ಲಿ ಕೆಲಸ ಮಾಡಬೇಕು ಎಂದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಾಸ್ತಾವಿಕವಾಗಿ ಮಾತಾಡುತ್ತಾ ಹೊಸದಾಗಿ ಚುನಾಯಿತಗೊಂಡ ಕಾರ್ಯಕಾರಿ ಸಮಿತಿಯು ಹಲವಾರು ಹೊಸ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದರು. ಸಂಘವು ಈಗಾಗಲೇ ಋಣಮುಕ್ತಗೊಂಡಿದ್ದು ಆದಾಯವಾಗಿ ಬರುವ ಧನಸಂಪತ್ತನ್ನು ಅನಾವಶ್ಯಕ ವಿನಿಯೋಗಿಸದೇ, ಸಂಘದ ಬೃಹತ್ ಯೋಜನೆಗಳಿಗಾಗಿ ಉಳಿತಾಯ ಮಾಡಲಾಗುವುದು ಎಂದರು. ಸಂಘದ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೆಹಲಿಯಲ್ಲಿ ಮಾತ್ರವಲ್ಲದೇ, ದೇಶದ ಇತರೆಡೆ ಅವಕಾಶ ಸಿಕ್ಕಾಗ ನಡೆಸಲು ಪ್ರಯತ್ನಿಸಲಾಗುವುದು ಎಂದರು. ಶ್ರೀ ಬಸವಪ್ರಭು ಎಸ್. ಪಾಟೀಲ್ ಅವರು ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿಯಾಗಿ ದೆಹಲಿಯಲ್ಲಿದ್ದು ಕರ್ನಾಟಕದ ಅಪಾರ ಜನತೆಗೆ ಮತ್ತು ಸರಕಾರಕ್ಕೆ ಕಾನೂನು ಸಲಹೆ ನೀಡಿ ಬಹಳಷ್ಟು ಉಪಕಾರ ಮಾಡಿದ್ದಾರೆ ಎಂದರು. ಶ್ರೀ ಪಾಟೀಲ್ ಅವರು ಅಂತರ್-ರಾಜ್ಯ ಕೃಷ್ಣಾನದಿ ನೀರು ವಿವಾದದಲ್ಲಿ ಕರ್ನಾಟಕ ಸರಕಾರವನ್ನು ಪ್ರತಿನಿಧಿಸುತ್ತಿದ್ದಾರೆ.

ಮಾರ್ಚ್ ತಿಂಗಳಿನಲ್ಲಿ ನಡೆದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ಬೆಳ್ಳಿಯಪ್ಪ ಗ್ರೂಪ್‌ನ ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ತಂಡದವರಿಗೆ ಶ್ರೀ ಪಾಟೀಲ್ ಅವರು ಟ್ರೋಫಿ ಮತ್ತು ಬಹುಮಾನಗಳನ್ನು ನೀಡಿ ಗೌರವಿಸಿದರು. ರನ್ನರ್ಸ್ ಅಪ್ ತಂಡ ಸೌತ್ ಕೆನರಾ ಕ್ರಿಕೆಟ್ ಕ್ಲಬ್‌ನ ಶ್ರೀ ರಾಘವ ಶರ್ಮ ಮತ್ತು ತಂಡದವರಿಗೂ ಬಹುಮಾನವನ್ನು ವಿತರಿಸಲಾಯಿತು.

ನೂತನ ವಿವಾಹಿತರಾದ ಸಂಘದ ಸದಸ್ಯರಾದ ಶ್ರೀ ರಾಘವ ಶರ್ಮಾ, ಶ್ರೀ ಪ್ರದೀಪ್ ಪೂಜಾರಿ, ಶ್ರೀ ಮಂಜುನಾಥ್ ಗೌಡ, ಶ್ರೀ ಸುಬ್ರಹ್ಮಣ್ಯ ಭಟ್, ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಮತ್ತು ಶ್ರೀಮತಿ ವಂದನಾ ರೈ ದಂಪತಿಗಳನ್ನು ಹೂಗುಚ್ಛ ಮತ್ತು ಉಡುಗೊರೆಗಳನ್ನು ನೀಡಿ ಸತ್ಕರಿಸಲಾಯಿತು. ಶ್ರೀ ಪಾಟೀಲ್ ಮತ್ತು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಶುಭವನ್ನು ಕೋರಿದರು.



ಶಿವಮೊಗ್ಗದ ರಂಗತರಂಗ ತಂಡದವರು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ದೆಹಲಿ ಕರ್ನಾಟಕ ಸಂಘದ ಜಂಟಿ ಆಶ್ರಯದಲ್ಲಿ 'ರಾವಿ ನದಿಯ ದಂಡೆಯಲ್ಲಿ' ನಾಟಕವನ್ನು ಪ್ರದರ್ಶಿಸಿದರು. ತಂಡದ ಸಂಭಾವನಾ ಶುಲ್ಕದ ಧನಸಹಾಯವನ್ನು ಮಾಡಿದ ನ್ಯಾಯವಾದಿ ಶ್ರೀ ಬಸವಪ್ರಭು ಎಸ್. ಪಾಟೀಲ್ ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸಲಾಯಿತು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಅವರು ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ವಂದನಾರ್ಪಣೆ ಮಾಡಿದರು. ಅ

*ಪೂರ್ಣಿಮಾ ಗೌಡ*







# ರಾವಿ ನದಿಯ ದಂಡೆಯಲ್ಲಿ... – ಮತಾಂಧತೆ ಮೀರಿದ ಮಾನವೀಯತೆ

ಶಿವಮೊಗ್ಗದ ಸಹ್ಯಾದ್ರಿ ರಂಗ ತರಂಗವು ಅಸ್ಗರ್ ವಜಾಹತ್ ಅವರ 'ರಾವಿ ನದಿಯ ದಂಡೆಯಲ್ಲಿ' ನಾಟಕವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ 15ರಂದು ಪ್ರದರ್ಶಿಸಿತು. ಕರ್ನಾಟಕ ಮಾತ್ರವಲ್ಲದೇ ದೇಶದ ಪ್ರಮುಖ ನಗರಗಳಲ್ಲಿ ಹಲವಾರು ಪ್ರಮುಖ ನಾಟಕಗಳನ್ನು ಕಳೆದ 25 ವರ್ಷಗಳಿಂದ ತಂಡವು ಪ್ರದರ್ಶಿಸಿದೆ. ಭಾರತ ವಿಭಜನೆಯಾಗಿ ಪಾಕಿಸ್ಥಾನವು ರೂಪುಗೊಂಡಾಗ ನಡೆಯುವ ಘಟನೆಗಳನ್ನು ಹೊಂದಿರುವ ನಾಟಕವು ಲಾಹೋರ್‌ನಲ್ಲಿ ತನ್ನ ಕುಟುಂಬದವರೆಲ್ಲರನ್ನೂ ಕಳೆದುಕೊಂಡು ತನ್ನ ಬಂಗಲೆಯಲ್ಲಿ ಏಕಾಂಗಿಯಾಗಿ ಉಳಿದ ಹಿಂದೂ ತಾಯಿಯೊಬ್ಬಳು ಅದೇ ಬಂಗಲೆಯಲ್ಲಿ ವಾಸಿಸಲು ಬರುವ ಮುಸ್ಲಿಂ ಕುಟುಂಬವೊಂದರ ಮೇಲೆ ತೋರುವ ಪ್ರೀತಿಯ ಕತೆ ಇದಾಗಿದೆ. ದೆಹಲಿಯ ರಂಗಕರ್ಮಿ **ಶಿವಾನಂದ ಇಂಗಳೇಶ್ವರ** ಅವರು ನಾಟಕದ ಕುರಿತು ಅಭಿಮತಕ್ಕಾಗಿ ವಿಶೇಷವಾಗಿ ಬರೆದಿದ್ದಾರೆ. ಫೋಟೋಗಳು: **ಬಾಲಕೃಷ್ಣ ನಾಯ್ಕ್ ಡಿ**.

ಆಗಸ್ಟ್ 15 ಭಾರತಕ್ಕೆ ಸ್ವಾತಂತ್ರ್ಯ ಸಂಭ್ರಮದ ದಿನ. ಈ ಸಂಭ್ರಮ ಇಂದಿನ ಪೀಳಿಗೆಗೆ ದೊರೆತದ್ದು, ಅಗಣಿತ ಭಾರತೀಯರ ತ್ಯಾಗ ಬಲಿದಾನದ ಫಲ. ಆದರೆ ಸ್ವಾತಂತ್ರ್ಯದ ಫಲದ ಜೊತೆ ಜೊತೆಗೆ ದೇಶವಿಭಜನೆಯಾಗಿ ಎಂದೂ ಮರೆಯದ ಗಾಯ, ಸದಾ ಕಾಡಿಸುತ್ತಿರುತ್ತದೆ. ಆ ದಳ್ಳುರಿಯಲ್ಲಿ ಅಹುತಿಯಾದ ಜೀವಗಳೆಷ್ಟೋ? ಒಡೆದ ಮನಗಳ, ಮನೆಗಳ ನೋವು ಏನೆಂದು ಹೇಳುವುದು.

ಇಂದಿನ ಪಾಕಿಸ್ತಾನದ ಲಾಹೋರಿನ ರತನ್ ಜೌಹರಿಯ ಪರಿವಾರ ಕೂಡ ಈ ದಳ್ಳುರಿಯಲ್ಲಿ ಆಹುತಿಗೊಂಡಿದ್ದು, ಆತನ ತಾಯಿ ಮಾತ್ರ ಬದುಕುಳಿದಿದ್ದು ಆ ಇಡೀ ಮನೆಯಲ್ಲಿ ಒಬ್ಬಳೇ ಇರುತ್ತಾಳೆ.

ಈ ಮನೆಯನ್ನು ಲಖನೌದಿಂದ ಬಂದಂಥ ಸಿಕಂದರ ಮಿರ್ಜಾ ಅವರಿಗೆ ಕೊಡಲಾಗಿದೆ. ತಮಗೆ ಸಿಕ್ಕ ಮನೆಯಿಂದ ಹಿಂದೂ ತಾಯಿಯನ್ನು ಹೊರ ಹಾಕುವ ಪ್ರಯತ್ನವನ್ನು ಅವರು ಮಾಡುತ್ತಾರೆ. ಆದರೆ ಇದು ತನ್ನ ಮನೆ ಇದನ್ನ ಬಿಟ್ಟು ತಾನೆಲ್ಲೂ ಹೋಗಲಾರೆ ಎಂದು ಆ ತಾಯಿ ಪಟ್ಟು ಹಿಡಿಯುತ್ತಾಳೆ.

ಇಲ್ಲಿನ ಧರ್ಮನಿಷ್ಠ ನಾಯಕರು ಪಾಕಿಸ್ತಾನ ಕೇವಲ ಮುಸ್ಲಿಂ ಜನರಿಗೆ ಮಾತ್ರ, ಮುಸ್ಲೀಮರಲ್ಲದವರು ಇಲ್ಲಿ ಇರತಕ್ಕದ್ದಲ್ಲ, ಇರಬೇಕೆಂದರೆ ಮತಾಂತರ ಒಂದೇ ಪರ್ಯಾಯ ಎನ್ನುತ್ತಾರೆ.

ರತನ್‌ನ ತಾಯಿ ಲಾಹೋರಿನಲ್ಲಾದ ಮತೀಯ ಗಲಭೆಗಳ, ಬರ್ಬರ ಹತ್ಯೆಗಳ, ರಾವಿ ನದಿಯಲ್ಲಿ ಹರಿದ ರಕ್ತದ ಕೋಡಿಗೆ ಸಾಕ್ಷಿಯಾಗಿದ್ದಾರೆ. ತನ್ನವರನ್ನೆಲ್ಲ ಕಳೆದುಕೊಂಡಿದ್ದರೂ, ಸದ್ಯ ತನ್ನ ನೆರೆಹೊರೆಯವರೊಂದಿಗೆ ಒಂದಾಗಿ ಅವರಲ್ಲಿ ಭೇದವೆಣಿಸದೆ ಅವರ ಕಷ್ಟ ಸುಖಕ್ಕೆ ನೆರವಾಗುತ್ತಿರುತ್ತಾಳೆ.

ರೋಗ ರುಜಿನಕ್ಕೆ ಔಷಧಿ ಕೊಟ್ಟು ಅವರ ಆರೋಗ್ಯ ರಕ್ಷಣೆ ಮಾಡುತ್ತ ಮಾನವೀಯ ಮೌಲ್ಯಗಳ ಮುಂದೆ ಮತಭೇದ ಮಾಡದೆ, ರಾವಿ ನದಿಯ ದಂಡೆಯಲ್ಲಿ ತನ್ನ ನಿತ್ಯ ಪೂಜೆ ಪಠಣ ಕಾರ್ಯಗಳಿಂದ ಜೀವನ ಸಾಗಿಸುತ್ತಿರುತ್ತಾಳೆ.

ಹಿಂದೂ ತಾಯಿ ಮುಸ್ಲಿಂ ಬಂಧು ಸಿಕಂದರ ಪರಿವಾರದ ಒಪ್ಪಿಗೆ ಪಡೆದು ಸಂಭ್ರಮದ ದೀಪಾವಳಿ ಆಚರಿಸುತ್ತಾಳೆ. ಸ್ಥಳೀಯರು ವಿಭಜನೆ ಪೂರ್ವದಲ್ಲಿ ತಾವು ಆಚರಿಸುತ್ತಿದ್ದ ದೀಪಾವಳಿಯ ನೆನಪನ್ನು ಮಾಡುತ್ತಾ ಹಬ್ಬದಲ್ಲಿ ಸಂಭ್ರಮಿಸುತ್ತಾರೆ. ಅದು ಧರ್ಮನಿಷ್ಠ ರಾಜಕೀಯ ಪುಢಾರಿಗಳಿಗೆ ಸಹಿಸಲಾಗುವುದಿಲ್ಲ. ಬಹಳಷ್ಟು ಮಂದಿಯ ಪ್ರೀತಿಗೆ ಪಾತ್ರಳಾಗಿದ್ದ ಆ ತಾಯಿಯ ಆಕಸ್ಮಿಕ ನಿಧನದಿಂದಾಗಿ ಅವಳ ಅಂತ್ಯ ಸಂಸ್ಕಾರ ಹೇಗೆ ನಿರ್ವಹಿಸಬೇಕೆಂಬ ಪ್ರಶ್ನೆ ಎದುರಾಗುತ್ತದೆ. ಇಲ್ಲಿ ಮತಭೇದ ಮರೆತು ಮಾನವೀಯ ಮೌಲ್ಯಗಳ, ಸರ್ವಧರ್ಮ ಸಹಿಷ್ಣುತೆಯ ಪಾಠ ಅನ್ಯಮತೀಯರಿಂದ ನಡೆಯುತ್ತದೆ. ರಾವಿ ನದಿಯ ದಂಡೆಯ ಮೇಲೆ ಪರಧರ್ಮೀಯರೊಟ್ಟಿಗೆ ಸೇರಿ ಹಿಂದೂ ಸ್ತ್ರೀಯ ಅಂತ್ಯ ಸಂಸ್ಕಾರ ಹಿಂದೂ ರೀತಿ ರಿವಾಜುಗಳಿಂದ ನೆರವೇರಿಸಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದರೊಟ್ಟಿಗೆ ಪರಧರ್ಮ ಸಹಿಷ್ಣುತೆಗೆ ಮಾದರಿಯಾಗುತ್ತಾರೆ.

ನಾಟಕದ ಈ ಘಟನೆಗೆ 15 ಅಗಸ್ಟ್ 2013ರಂದು ದೆಹಲಿ ಕನ್ನಡಿಗರು ಸಾಕ್ಷಿಯಾಗಿ ಇತಿಹಾಸದ ಆ ಕಾಲ ಘಟ್ಟಕ್ಕೆ ಹೋಗಿ ಬಂದರು. ಸಹ್ಯಾದ್ರಿ ರಂಗ ತರಂಗ (ರಿ) ಶಿವಮೊಗ್ಗದ ಕಲಾವಿದರು ವೀಕ್ಷಕರು ರಂಗ ಮಂದಿರದಿಂದ ಹೊರಬರುವಾಗ ಆ ಕರಾಳ ದಿನಗಳ, ಮನಕಲುಕುವ ಇತಿಹಾಸದ ಪುಟಗಳ ಮಾನವೀಯ ಮೌಲ್ಯಗಳ ಮಂಥನಕ್ಕೆ ಅನುವು ಮಾಡಿಕೊಟ್ಟರು. ತಮ್ಮ ಪ್ರಬುದ್ಧ ಅಭಿನಯದಿಂದ ದೆಹಲಿ ಕನ್ನಡಿಗರ ಮನ ಗೆದ್ದರು. ಅಸ್ಗರ್ ವಜಾಹತ್ ಅವರ ಮೂಲ ಹಿಂದಿ ನಾಟಕವನ್ನು ಕನ್ನಡಕ್ಕೆ ಈರಣ್ಣ ಇಟಗಿ ಅನುವಾದಿಸಿದ್ದು, ಹಿರಿಯ ರಂಗಕರ್ಮಿ ಕಾಂತೇಶ್ ಕದರಮಂಡಲಗಿ ಅವರ ಸಮರ್ಥ ನಿರ್ದೇಶನದಲ್ಲಿ ಪ್ರಯೋಗಿಸಲ್ಪಟ್ಟಿತು. ಅ



## ಎದ್ದೇಳು ಜಗವೀರ

ಏಳು ಕನ್ನಡ ಕುವರ ಎದ್ದೇಳು ಜಗವೀರ
ವೈರಿಗಳ ಎದೆಮೆಟ್ಟಿ ಸಿಗಿದು ಹಾಕು
ಕನ್ನಡಾಂಬೆಯ ಪುತ್ರ – ಭಾರತಿಯ ಸುಪುತ್ರ
ಸೆಡ್ಡೊಡೆದು ಮೀಸಿಯನು ತಿರುವಿ ಹಾಕು.

ಸ್ವಾತಂತ್ರ ಪೂರ್ವದಲಿ ಒಂದಾಗಿ ಬೆಳೆದಿದ್ದ
ಮನೆ ಮರವ ಕಡಿದೊಗೆದು 'ಪಾಕಿ'ಯಾದ
ತೃಪ್ತಿ ಇಲ್ಲದ ಭಾಯಿ ಬೇರೆ ಮನೆಯನು ಮಾಡಿ
ಜಗಳಕ್ಕೆ ಕಾಯುತಿಹ 'ಪಾಪಿ'ಯಾದ.

ಭಾರತದ ನಂದನವನವಾಗಿ ಶೋಭಿಸುವ
ಕಾಶ್ಮೀರ ಕಬಳಿಸಲು ಹೊಂಚುತಿಹನು
ಪಂಜಾಬ ರಾಜ್ಯದಲಿ ಉಗ್ರವಾದಿಯ ಕಳಿಸಿ
ನಮ್ಮೊಳಗೆ ವಿಷಬೀಜ ಬಿತ್ತುತಿಹನು.

ಪೂರ್ವದಲಿ ಶರಣಾಗಿ ಸೋತ ಯುದ್ಧದ ನೆನಪು
ಮರುಕಳಿಸಿ ಮತ್ತವಗೆ ಕಾಡುತಿಹುದು
ಬಾಂಗ್ಲಾದೇಶದ ಭೂಮಿ ಬಂಗಾರವಾಗಿತ್ತು
ಅದಕಾಗಿ ಈ ವೇಷ ಹಾಕುತಿಹನು.

ಅವನ ಬೆನ್ನಿಗೆ ಬೇರೆ ದೇಶಗಳು ಇದ್ದರೂ
ಅಂಜಬಾರದು ನಾವು ಕ್ಷಾತ್ರ ಧರ್ಮಿಗಳು
ನಮ್ಮ ಬೆನ್ನಿಗೆ ಆದಿ ಶಕ್ತಿಯಾ ನೆರಳಿರಲು
ಮುನ್ನುಗ್ಗಲೇಬೇಕು ಅವನ ಸೆದೆಬಡಿಯಲು.

ಕನ್ನಡದ ಸೈನಿಕನೇ ಭಾರತೀಯನು ನೀನು
ನೆನಪಿದೆಯೇ ಕಿತ್ತೂರ ಚೆನ್ನಮ್ಮ ರಾಣಿ?
ಝಳಪಿಸುವ ಖಡ್ಗಗಳ ಝೇಂಕಾರ ನಾದಕ್ಕೆ
ಹೆಸರಾದ ಲಕ್ಷ್ಮಮ್ಮ ಝಾನ್ಸಿರಾಣಿ? ಅ

***ಸುಧಾಕರ ಕುರಂದವಾಡ***
***ಜನಕಪುರಿ***

## ಮುನಿಸು

ಬೀಸುವ ಬಿರುಗಾಳಿಗೆ
ತೇಲಾಡುವ ಮೋಡಕೆ
ಗುಡುಗುವ ಬಾನಿಗೆ
ಮಿಂಚುವ ಮೇಘಕೆ
ಕರಿಮೋಡದ ಆರ್ಭಟಕೆ
ಭುವಿ ನಡುಗಿದೆ
ಗಿರಿ ಉರುಳಿದೆ
ನದಿಸಾಗರ ತುಂಬಿದೆ
ಕೆರೆ ಕಟ್ಟೆಗಳೊಡೆದಿವೆ
ಮನೆ ಮಂದಿರಗಳು ಮುಳುಗಿವೆ
ಸಾಕಿದ ಸಾಕದ ಪ್ರಾಣಿಗಳೆಲ್ಲಿವೆ
ಎಲ್ಲವೂ ಭೋರ್ಗರೆತದ ಪಾಲು
ಪ್ರಕೃತಿಯ ಮುನಿಸಿಗೆ
ಕಾರಣ ಬಲ್ಲೆವು
ಮಾಡಿಹೆವಪಚಾರವ
ಮಾಯಾಜಾಲದ ಜೀವನಕೆ
ನಾಗಲೋಟದಿ ಓಡುತಲಿ
ಮರೆತೆವು ಪ್ರಕೃತಿಯ
ಯಾಂತ್ರಿಕ ಬದುಕಿನಲಿ
ಎಲ್ಲವೂ ಹೋಯಿತು
ಗಂಗೆಯ ಭೋರ್ಗರೆತದಲಿ
ಉಳಿಯಿತು ನೀರವ ಪ್ರಕೃತಿಯಲಿ ಅ

***ಎಸ್.ಸಿ.ಹೇಮಲತಾ***



### ಲೋಕಸಭೆಗೆ ಆಯ್ಕೆಯಾದ ಹೊಸ ಸದಸ್ಯರು

ಬೆಂಗಳೂರು ಗ್ರಾಮಾಂತರ ಹಾಗೂ ಮಂಡ್ಯ ಲೋಕಸಭೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಡಿ. ಕೆ ಸುರೇಶ್ ಹಾಗೂ ನಟಿ ಕು. ರಮ್ಯಾ (ದಿವ್ಯ ಸ್ಪಂದನಾ) ಅವರು ಆಯ್ಕೆಯಾಗಿದ್ದಾರೆ. ಈ ಇಬ್ಬರೂ ಕೂಡ ಮೊದಲ ಬಾರಿಗೆ ಚುನಾವಣೆಯನ್ನು ಎದುರಿಸಿ ಲೋಕಸಭಾ ಸದಸ್ಯರಾಗಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಆಯ್ಕೆ ಯಾಗಿರುವ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿರುವ ಡಿ. ಕೆ. ಸುರೇಶ್ ಅವರು ರಾಮನಗರ ಜಿಲ್ಲೆ ಕನಕಪುರ ತಾಲ್ಲೋಕಿನ ದೊಡ್ಡಾಲಹಳ್ಳಿ ಗ್ರಾಮದವರು. ಮಂಡ್ಯ ಲೋಕಸಭಾ ಕ್ಷೇತ್ರದಿಂದ ಆಯ್ಕೆ ಯಾಗಿರುವ ಕನ್ನಡದ ಜನಪ್ರಿಯ ಚಲನ ಚಿತ್ರ ತಾರೆಯಾದ ರಮ್ಯಾ ಅವರು ಮೂಲತ: ಮಂಡ್ಯದವರಾಗಿದ್ದು ಕನ್ನಡವೂ ಸೇರಿದಂತೆ ತೆಲುಗು ತಮಿಳಿನ ಚಲನ ಚಿತ್ರಗಳಲ್ಲೂ ನಟಿಸಿ ಹೆಸರು ಗಳಿಸಿದ್ದಾರೆ.

ಕು. ರಮ್ಯಾ ಹಾಗೂ ಶ್ರೀ ಡಿ.ಕೆ. ಸುರೇಶ್ ಅವರನ್ನು ದೆಹಲಿಯ ಕರ್ನಾಟಕ ಭವನದಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಭೇಟಿ ಮಾಡಿ ಅಭಿನಂದಿಸಿದರು.







### ಬಿ.ಕೆ. ಹರಿಪ್ರಸಾದ್ ರಾಜ್ಯಸಭೆಗೆ

ವಿಧಾನಸಭೆಯಿಂದ ರಾಜ್ಯಸಭೆಯ ಒಂದು ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀ ಹರಿಪ್ರಸಾದ್ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಆಗಿದ್ದಾರೆ.

### ಯುವ ಪುರಸ್ಕಾರ

ಯುವ ಕವಿ ಲಕ್ಕೂರು ಆನಂದ ಅವರ ಬಟವಾಡೆಯಾಗದ ರಸೀತಿ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2013ರ ಯುವ ಪುರಸ್ಕಾರ ಸಿಕ್ಕಿದೆ.

### ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು

ಕನ್ನಡದ ಹಿರಿಯ ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿ ಅವರಿಗೆ ಮಕ್ಕಳ ಸಾಹಿತ್ಯದ ಸಮಗ್ರ ಕೊಡುಗೆಗಾಗಿ ದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ 2013 ರ ಬಾಲ ಸಾಹಿತ್ಯ ಪುರಸ್ಕಾರವು ಲಭಿಸಿದೆ. ಪುರುಸ್ಕಾರ ಪ್ರದಾನ ಸಮಾರಂಭವು ನವಂಬರ್ 15ರಂದು ಗೋವಾದಲ್ಲಿ ನಡೆಯಲಿದೆ.

# ತೆಲಂಗಾಣ

## ಮತ್ತೆ ಹೊಸ ರಾಜ್ಯಗಳ ಉದಯಕ್ಕೆ ನಾಂದಿ

ಮೊದಲ ಭಾಷಾವಾರು ರಾಜ್ಯ ಆಂಧ್ರಪ್ರದೇಶದ ವಿಭಜನೆಯಾಗಿ ತೆಲಂಗಾಣವೆಂಬ ಹೊಸ ರಾಜ್ಯದ ಉದಯ, ದೇಶಾದ್ಯಂತ ಹೊಸ, ಸಣ್ಣ ರಾಜ್ಯಗಳ ಹುಟ್ಟಿಗೆ ನಾಂದಿಯಾಗಬಹುದೇ?

ಸ್ಥಳೀಯ ಆಶೋತ್ತರಗಳು ಭಾರತದ ಫೆಡರಲ್ ವ್ಯವಸ್ಥೆ ಮತ್ತು ದೇಶದ ಐಕ್ಯತೆಯ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಚಿಂತನೆ ಅಗತ್ಯ.

ಅಭಿಮತಕ್ಕಾಗಿ ಹಿರಿಯ ಕತೆಗಾರ, ಲೇಖಕ, ಅಂಕಣಗಾರ **ಪ್ರೇಮ ಶೇಖರ** ಅವರ ವಿಶೇಷ ಲೇಖನ ತೆಲಂಗಾಣ ರಾಜ್ಯದ ಹುಟ್ಟಿನ ಹಿನ್ನಲೆ ಕುರಿತು ವಿವರ ನೀಡುವುದರ ಜತೆಗೆ ಕರ್ನಾಟಕದಂತಹ ವಿಭಿನ್ನ ಸಂಸ್ಕೃತಿಗಳಿರುವ ರಾಜ್ಯಗಳಲ್ಲಿ ಯಾವ ರೀತಿಯ ಪ್ರಭಾವ ಬೀರಬಹುದು ಎಂದು ತಿಳಿಸುತ್ತದೆ.



ಸರಿಯಾಗಿ ಅರವತ್ತು ವರ್ಷಗಳ ಹಿಂದೆ, ಪೊಟ್ಟಿ ಶ್ರೀರಾಮುಲು ಅವರ ಬಲಿದಾನದ ಭಾವನಾತ್ಮಕ ಹಿನ್ನೆಲೆಯಲ್ಲಿ, 1953ರಲ್ಲಿ ರಚಿತವಾದ, ಮೂರು ವರ್ಷಗಳ ನಂತರ 1956ರಲ್ಲಿ ಹೈದರಾಬಾದ್ ಸಂಸ್ಥಾನದ ತೆಲುಗು ಪ್ರದೇಶಗಳನ್ನು ತನ್ನಲ್ಲಿ ಒಂದಾಗಿಸಿಕೊಂಡು ಗಾತ್ರದಲ್ಲಿ ಹಿಗ್ಗಿದ ಸ್ವತಂತ್ರ ಭಾರತದ ಮೊಟ್ಟ ಮೊದಲ ಭಾಷಾವಾರು ರಾಜ್ಯ ಆಂಧ್ರ ಪ್ರದೇಶದ ವಿಭಜನೆಗೆ ಜುಲೈ 30, 2013ರಂದು ಕ್ಷಣಗಣನೆ ಆರಂಭವಾಗಿದೆ. ರಾಷ್ಟ್ರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರಧಾರಿಯಾಗಿರುವ, ಸಂಯುಕ್ತ ಪ್ರಗತಿರಂಗದ ಪ್ರಮುಖ ಅಂಗವಾದ ಕಾಂಗ್ರೆಸ್ ಪಕ್ಷ ತೆಲಂಗಾಣದ ಜನತೆಯ ಆಶೋತ್ತರಗಳಿಗೆ ಕೊನೆಗೂ ಸಕಾರಾತ್ಮಕವಾಗಿ ಸ್ಪಂದಿಸಿ ಹೊಸ ರಾಜ್ಯದ ನಿರ್ಮಾಣಕ್ಕೆ ಹಸಿರು ನಿಶಾನೆ ತೋರಿಸಿದೆ.

ಹಾಗೆ ನೋಡಿದರೆ ಆಂಧ್ರ ಪ್ರದೇಶದ ವಿಭಜನೆಯ ಬೇಡಿಕೆ ಅದರ ಹುಟ್ಟಿನೊಂದಿಗೇ ಆರಂಭವಾಯಿತು ಎನ್ನಬಹುದು. ಶ್ರೀಮಂತ ಆಂಧ್ರದ ಜತೆ ವಿಲೀನಗೊಳ್ಳಲು ಹಿಂದುಳಿದ ತೆಲಂಗಾಣ ತಯಾರಿರಲಿಲ್ಲ. ಆದರೆ ಐತಿಹಾಸಿಕ ಹೈದರಾಬಾದ್ ನಗರವನ್ನು ಹೊಂದುವುದಕ್ಕೋಸ್ಕರ ಆಂಧ್ರದ ರಾಜಕಾರಣಿಗಳು ಏನೇನೋ ಆಶ್ವಾಸನೆಗಳನ್ನೊಡ್ಡಿ ತೆಲಾಂಗಣೀಯರನ್ನು ಒಪ್ಪಿಸಿದರು. ದುರಂತವೆಂದರೆ ಆ ಆಶ್ವಾಸನೆಗಳು ಅಕ್ಷರಶಃ ಪೊಳ್ಳು ಅಮಿಷಗಳಾಗಿಯೇ ಉಳಿದದ್ದು ಆಂಧ್ರಪ್ರದೇಶದ ಅಂತಿಮ ವಿಭಜನೆಗೆ ಕಾರಣವಾಗಿವೆ.

ಇಷ್ಟಾಗಿಯೂ, ಜೇನುಗೂಡಿಗೆ ಕಲ್ಲೆಸೆದಂತಹ ಆಂಧ್ರ ವಿಭಜನಾ ಪ್ರಕ್ರಿಯೆ ರಾಷ್ಟ್ರದ ಹಲವೆಡೆ ಪ್ರತ್ಯೇಕ ರಾಜ್ಯಗಳ ಕೂಗನ್ನು ತಾರಕಕ್ಕೇರಿಸಿದೆ. ನಾಲ್ಕು ದಶಕಗಳ ಹಿಂದೆ ತನ್ನ ಅರ್ಧಕ್ಕಿಂತಲೂ ಹೆಚ್ಚು ಭೂಭಾಗವನ್ನು ಕಳೆದುಕೊಂಡ ಅಸ್ಸಾಂನಲ್ಲಿ ಬೋಡೋಲ್ಯಾಂಡ್ ಮತ್ತು ಕಾಮ್ತಾಪುರಗಳಿಗಾಗಿನ ಬೇಡಿಕೆ ಹಿಂಸಾತ್ಮಕ ರೂಪ ತಳೆದು ಆ ಪುರಾತನ ನಾಡಿನ ರಾಜಕೀಯ ಅಸ್ತಿತ್ವ ನಿಕೃಷ್ಟತೆಗೀಡಾಗುವಂತಹ ಸೂಚನೆ ಕಾಣತೊಡಗಿದೆ. ಪಶ್ಚಿಮ ಬಂಗಾಳದಲ್ಲೂ ಹಲವು ವರ್ಷಗಳಿಂದ ತಹಬಂದಿನಲ್ಲಿದ್ದ ಗೂರ್ಖಾಲ್ಯಾಂಡ್ ಚಳುವಳಿ ಏಕಾಏಕಿ ಉತ್ಕರ್ಷಕ್ಕೇರಿದೆ. ಇದರ ಜತೆಗೇ ಮಹಾರಾಷ್ಟ್ರವನ್ನು ವಿಭಜಿಸಿ ವಿದರ್ಭ ರಾಜ್ಯದ ಸೃಷ್ಟಿಗೆ, ಈಗಾಗಲೇ ಒಮ್ಮೆ ವಿಭಜಿತವಾಗಿರುವ ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳನ್ನು ಮತ್ತೊಮ್ಮೆ ಹಲವಾರು ಪುಟ್ಟಪುಟ್ಟ ರಾಜ್ಯಗಳಾಗಿ ವಿಭಜಿಸುವ ಮಾತಿನ ಜತೆಗೇ ತಮಿಳುನಾಡನ್ನು ಮೂರು ರಾಜ್ಯಗಳಾಗಿ ವಿಭಜಿಸುವ ಪ್ರಸ್ತಾಪವೂ ಬರತೊಡಗಿದೆ. ಇಷ್ಟೆಲ್ಲಾ ಆಗುವಾಗ ಉತ್ತರ ಕರ್ನಾಟಕ ಮೌನವಾಗಿರುತ್ತದೆಂದು ನಿರೀಕ್ಷಿಸಲಾಗುವುದಿಲ್ಲ.

ಹಾಗೆ ನೋಡಿದರೆ ರಾಜ್ಯಗಳನ್ನು ಒಡೆದು ಹೊಸ ರಾಜ್ಯಗಳನ್ನು ಸೃಷ್ಟಿಸುವ ಪ್ರಕ್ರಿಯೆ ಹೊಸದೇನಲ್ಲ. ಕಳೆದ ಆರು ದಶಕಗಳಲ್ಲಿ ಅಂಥದನ್ನು ಈ ದೇಶ ಮತ್ತೆಮತ್ತೆ ಕಂಡಿದೆ. ವಿಶಾಲ ಬಾಂಬೆ ರಾಜ್ಯ 1960ರಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್‌ಗಳಾಗಿ ವಿಭಜನೆಗೊಂಡಿತು. ಆರುವರ್ಷಗಳ ನಂತರ ಪ್ರತ್ಯೇಕ "ಪಂಜಾಬಿ ಸುಬಾ"ಗಾಗಿನ ಸಿಖ್ ಸಮುದಾಯದ ಬೇಡಿಕೆ ಯಶಸ್ವಿಯಾಗಿ ಪಂಜಾಬ್ ರಾಜ್ಯ ತನ್ನ ದಕ್ಷಿಣ ಭಾಗವನ್ನು ಕಳೆದುಕೊಂಡು ಹರ್ಯಾಣದ ಜನ್ಮಕ್ಕೆ ಅವಕಾಶ ನೀಡಿತು. 1964ರಲ್ಲಿ ನಾಗಾಲ್ಯಾಂಡ್ ಅನ್ನು ಕಳೆದುಕೊಂಡಿದ್ದ ಅಸ್ಸಾಂ 1972ರಲ್ಲಿ ಮತ್ತೊಮ್ಮೆ ಒಡೆದು ಮೇಘಾಲಯದ ಹುಟ್ಟಿಗೆ ಕಾರಣವಾಯಿತು. 1997ರಲ್ಲಿ ಮೂರು ದೈತ್ಯ ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಬಿಹಾರಗಳು ಹೋಳಾಗಿ ಕ್ರಮವಾಗಿ ಉತ್ತರಾಖಂಡ, ಛತ್ತೀಸ್‌ಘರ್ ಮತ್ತು ಜಾರ್ಖಂಡ್‌ಗಳು ಅಸ್ತಿತ್ವಕ್ಕೆ ಬಂದು ರಾಜ್ಯಗಳ ಸಂಖ್ಯೆ ಇಪ್ಪತ್ತೆಂಟಾಯಿತು.

ಅಗಾಧ ಜನಾಂಗೀಯ, ಭಾಷಿಕ, ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿರುವ ಭಾರತದಲ್ಲಿ ಆಂತರಿಕ ಗಡಿಗಳಲ್ಲಿ ಆಗಾಗ್ಗೆ ಮಾರ್ಪಾಡುಗಳು, ಹೊಂದಾಣಿಕೆಗಳು ಅಗತ್ಯವೆನಿಸುವುದು ಸಹಜ. ವಿವಿಧ ಆಶೋತ್ತರಗಳನ್ನು ಈಡೇರಿಸಲು ರಾಜ್ಯಗಳ ವಿಭಜನೆ ಅಗತ್ಯವೆನಿಸುತ್ತದೆ ಮತ್ತು ಅದು ತೆಗೆದುಕೊಳ್ಳುವ ಕಾಲ ಅಶಾಂತಿಯ ದಳ್ಳುರಿಯ ಪ್ರಮಾಣವನ್ನು ನಿರ್ಧರಿಸುತ್ತದೆ. ಹೀಗೆ ಹೊಸ ರಾಜ್ಯಗಳ ಸೃಷ್ಟಿ ಹಲವು ಸಮಸ್ಯೆಗಳನ್ನು ಪರಿಹರಿಸಿದಂತೇ ಹಲವಾರು ಹೊಸ ಸಮಸ್ಯೆಗಳಿಗೂ ದಾರಿ ಮಾಡಿಕೊಡುವುದೂ ಅಂದರೆ ಒಂದರ್ಥದಲ್ಲಿ "ಅಗತ್ಯ ಕೇಡುಕು" ಆಗುವುದು ಸಹಜವೇ ಆಗಿದೆ.

ತನ್ನ ಏಳೆಂಟು ಸಾವಿರ ವರ್ಷಗಳ ದೀರ್ಘ ನಾಗರಿಕ ಇತಿಹಾಸದಲ್ಲಿ ಅಗಣಿತ ವಲಸೆಗಳು ಮತ್ತು ಧಾಳಿಗಳಿಂದಾಗಿ ಒಂದಿಡೀ ಖಂಡದಲ್ಲಿ ಕಾಣಬಹುದಾದಷ್ಟು ವೈವಿಧ್ಯತೆಯನ್ನು ಒಡಮೂಡಿಸಿಕೊಂಡಿರುವ ಭಾರತದಲ್ಲಿ ಎದ್ದು ಕಾಣುವುದು ಭಾಷಾವೈವಿಧ್ಯತೆ. ಈ ವಿಷಯದಲ್ಲಿ ಭಾರತ ವಿಶ್ವದಲ್ಲೇ ಅನನ್ಯ. ಯೂರೋಪಿನಂತೆ ಇಲ್ಲಿಯೂ ಸಹಾ ವಿವಿಧ ಭಾಷಾ ಪ್ರದೇಶಗಳು ಸರಿಸುಮಾರು ನಿರ್ದಿಷ್ಟವಾಗಿ ಗುರುತಿಸಬಹುದಾದ ಗಡಿಗಳನ್ನು ಹೊಂದಿವೆ. ಆದರೆ ಅಲ್ಲಿ ಮಧ್ಯಯುಗದಲ್ಲಿ ಭಾಷೆಗೊಂದು ಪ್ರತ್ಯೇಕ ರಾಜಕೀಯ ವ್ಯವಸ್ಥೆಯಾದ "ರಾಷ್ಟ್ರ-ರಾಜ್ಯಗಳು" (ನೇಷನ್ ಸ್ಟೇಟ್ಸ್) ಉದಯವಾದಂತೆ ಭಾರತದಲ್ಲಾಗಲಿಲ್ಲ. ಇದಕ್ಕೆ ಹಲವು ರಾಜಕೀಯ, ಸಾಮರಿಕ (ಸ್ಟ್ರಾಟಜಿಕ್) ಹಾಗೂ ಸಾಮಾಜಿಕ ಕಾರಣಗಳಿವೆ. ಭಾರತೀಯ ಉಪಖಂಡದ ಎಲ್ಲೆಯೊಳಗೆ ವಿವಿಧ ರಾಜಕೀಯ ಘಟಕಗಳ ಎಲ್ಲೆಗಳನ್ನು ನಿರ್ಧರಿಸುವಲ್ಲಿ ಭಾಷೆಗಿಂತಲೂ ಆಯಾ ಕಾಲದ ಇತಿಹಾಸ ನಿರ್ಮಾಪಕರ ಸೇನಾಸಾಮರ್ಥ್ಯ ಪ್ರಮುಖ ಪಾತ್ರ ವಹಿಸಿದ್ದನ್ನು ಇತಿಹಾಸ ದಾಖಲಿಸಿದೆ. ಎರಡು ಶತಮಾನಗಳ ಹಿಂದೆ ಉಪಖಂಡದಲ್ಲಿ ಒಂದೇ ರಾಜಕೀಯ ವ್ಯವಸ್ಥೆ, ಒಂದೇ ಸೇನೆ ಮತ್ತು ಒಂದೇ ಅರ್ಥವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತಂದ ಬ್ರಿಟಿಷರೂ ಸಹಾ ನಂತರದ ದಿನಗಳಲ್ಲಿ ಪರಿಣಾಮಕಾರೀ ಆಡಳಿತ ಹಾಗೂ ರಕ್ಷಣೆಯ ದೃಷ್ಟಿಯಿಂದ ವಿವಿಧ ರಾಜಕೀಯ ಘಟಕಗಳ ಸೃಷ್ಟಿಗೆ ಮುಂದಾದರೂ ಅವುಗಳನ್ನು ಭಾಷೆಯ ಮೇಲೆ ಆಧರಿಸಲು ಹೋಗಲಿಲ್ಲ. ಅವರ ಆ ಕ್ರಿಯೆಯನ್ನು ನಿರ್ಧರಿಸಿದ್ದು ವಸಾಹತುಶಾಹಿಯ ವಿಸ್ತರಣೆಯ ವಿಧಾನ ಮತ್ತು ಗತಿ, ಪ್ರಮುಖ ಸೇನಾನೆಲೆಗಳು ಮತ್ತು ರಾಜಕೀಯ ಆಡಳಿತ ಕೇಂದ್ರಗಳಿಂದ ತಮ್ಮ ಕೈ ಸುಲಭವಾಗಿ, ಕ್ಷಿಪ್ರವಾಗಿ ಎಷ್ಟು ದೂರಕ್ಕೆ ಚಾಚಬಹುದೋ ಎಂಬ ವಾಸ್ತವ ಪ್ರಜ್ಞೆ. ಮದ್ರಾಸ್, ಬಾಂಬೆ, ಬಂಗಾಲ, ಪಂಜಾಬ್, ಈಸ್ಟ್ ಬೆಂಗಾಲ್ ಮತ್ತು ಅಸ್ಸಾಂ, ಯುನೈಟೆಡ್ ಪ್ರಾವಿನ್ಸ್ ಮುಂತಾದ, ಬಹುಸಾಂಸ್ಕೃತೀಯ ಹಾಗೂ ಬಹುಭಾಷೀಯ ಪ್ರಾಂತ್ಯಗಳು ಸೃಷ್ಟಿಯಾದದ್ದು ಈ ಹಿನ್ನೆಲೆಯೊಂದಿಗೆ.

ಭಾರತೀಯ ಉಪಖಂಡದ ಎಲ್ಲೆಯೊಳಗೆ ವಿವಿಧ ರಾಜಕೀಯ ಘಟಕಗಳ ಎಲ್ಲೆಗಳನ್ನು ನಿರ್ಧರಿಸುವಲ್ಲಿ ಭಾಷೆಗಿಂತಲೂ ಆಯಾ ಕಾಲದ ಇತಿಹಾಸ ನಿರ್ಮಾಪಕರ ಸೇನಾಸಾಮರ್ಥ್ಯ ಪ್ರಮುಖ ಪಾತ್ರ ವಹಿಸಿದ್ದನ್ನು ಇತಿಹಾಸ ದಾಖಲಿಸಿದೆ.

ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗೆ ಭಾಷೆಯ ಮಹತ್ವ ಅರಿವಾದದ್ದು 1919ರ ಸುಮಾರಿಗೆ. ಸ್ವಾತಂತ್ರ್ಯದ ಕಹಳೆಯನ್ನು ದೇಶದ ಎಲ್ಲ ಮೂಲೆ-ಮೂಲೆಗಳಲ್ಲೂ ಮೊಳಗಿಸಲು ಆಯಾ ಪ್ರದೇಶದ ತಾಯಿನುಡಿಯೇ ಅತ್ಯಂತ ಪರಿಣಾಮಕಾರಿಯಾದ ಮಾರ್ಗ ಎಂದು ಆ ವರ್ಷ ಮನಗಂಡ ಕಾಂಗ್ರೆಸ್ ನಾಯಕತ್ವ ಎರಡು ವರ್ಷಗಳ ನಂತರ ತನ್ನ ಸಂವಿಧಾನದಲ್ಲಿ ತಿದ್ದುಪಡಿಯೊಂದನ್ನು ತಂದು ತನ್ನ ಪ್ರಾಂತೀಯ ಘಟಕಗಳನ್ನು ಭಾಷೆಗಳ ಆಧಾರದ ಮೇಲೆ ಪುನರ್‌ರಚಿಸಿತು. ಭಾಷಾವಾರು ರಾಜ್ಯಗಳ ರಚನೆಗೆ ಮೊದಲ ಹೆಜ್ಜೆ ಎಂದು ಇದನ್ನು ಗುರುತಿಸಬಹುದು. ಸ್ವಾತಂತ್ರ್ಯ ಹತ್ತಿರವಾಗುತ್ತಿದ್ದಂತೇ ರಾಷ್ಟ್ರದ ಆರ್ಥಿಕ ಪ್ರಗತಿಗೆ ಮತ್ತು ಜನರ ಜೀವನಮಟ್ಟದ ಉನ್ನತಿಗೆ ಶಿಕ್ಷಣ ಅತ್ಯಗತ್ಯವೆಂಬ, ಆ ಶಿಕ್ಷಣ ಮಾತೃಭಾಷೆಯಲ್ಲಿರುವುದು ಸೂಕ್ತವೆಂಬ, ಅದಕ್ಕಾಗಿ ಭಾಷಾವಾರು ಪ್ರಾಂತ್ಯಗಳ ರಚನೆ ಸಹಕಾರಿಯೆಂಬ ಅಭಿಪ್ರಾಯ ಬಲಗೊಳ್ಳುತ್ತಾ ಹೋಗಿ 1947-48ರಲ್ಲಿ ಅದು ಇಡೀ ರಾಷ್ಟ್ರದಲ್ಲಿ ಪ್ರತಿಧ್ವನಿಸತೊಡಗಿತು. ಆದರೆ, ಮೊದಲಿಗೆ ಅಂತ ಭಾವನೆಗೆ ಇಂಬುಗೊಟ್ಟಿದ್ದ ಕಾಂಗ್ರೆಸ್ ಪಕ್ಷದ ಧೋರಣೆ ಈಗ ಬದಲಾಗಿತ್ತು. ದೇಶವಿಭಜನೆ ಮತ್ತು ಅದು ತಂದ ಅಗಾಧ ಸಮಸ್ಯೆಗಳ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ಮುಳುಗಿಹೋಗಿದ್ದ ನೆಹರೂ ಸರಕಾರಕ್ಕೆ ಭಾಷಾವಾರು ರಾಜ್ಯಗಳ ನಿರ್ಮಾಣ ವಿಭಜನಾಶಕ್ತಿಗಳ ಕೈಯಲ್ಲಿ ದುರುಪಯೋಗಗೊಳ್ಳಬಹುದೆಂಬ ಆತಂಕ ಕಾಡಿದ್ದರಲ್ಲಿ ಅಚ್ಚರಿಯೇನಿಲ್ಲ. ಕಾಶ್ಮೀರದ ವಿಷಯದಲ್ಲಿ ಪಾಕಿಸ್ತಾನದ ಜತೆ ಯುದ್ಧ ಆರಂಭವಾದ ದಿನ ಅಂದರೆ ಅಕ್ಟೋಬರ್ 27, 1947ರಂದು ಭಾಷಾವಾರು ರಾಜ್ಯಗಳ ಸೃಷ್ಟಿಯ ಬಗೆಗಿನ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಪ್ರಧಾನಿ ಜವಹರ್ ಲಾಲ್ ನೆಹರೂ "ಮೊದಲ ಕೆಲಸಗಳಿಗೆ ಮೊದಲ ಆದ್ಯತೆ, ಈಗ ದೇಶದ ರಕ್ಷಣೆ ಮತ್ತು ಸುಭದ್ರತೆಗೆ ಮೊದಲ

ಆದ್ಯತೆ" ಎಂದು ಉತ್ತರಿಸಿ ತಮ್ಮ ಸರಕಾರದ ಮನೋಭಾವದ ಸ್ಪಷ್ಟ ಚಿತ್ರಣ ನೀಡಿದರು. ಮರುವರ್ಷ ಭಾಷಾವಾರು ಪ್ರಾಂತ್ಯಗಳ ಸಾಧಕ–ಬಾಧಕಗಳನ್ನು ಪರಿಶೀಲಿಸಿದ ಎಸ್. ಕೆ. ದಾರ್ ಅವರ ನೇತೃತ್ವದ ಸಮಿತಿ ಸಹಾ ದೇಶದ ಅಖಂಡತೆಯ ಪ್ರಶ್ನೆಯನ್ನೆತ್ತಿ ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ವಿರೋಧಿಸಿತು. ಆದರೆ ಜನಾಭಿಪ್ರಾಯ ಬೇರೆಯದೇ ಆಗಿತ್ತು. ಸ್ವಾತಂತ್ರ್ಯ ತನ್ನೊಂದಿಗೆ ಭಾಷಾವಾರು ಪ್ರಾಂತ್ಯಗಳ ರಚನೆಯನ್ನೂ ತಂದು ತಮ್ಮನ್ನು ತಮ್ಮ ಭಾಷಿಕರೊಡನೆ ಒಂದಾಗಿಸುತ್ತದೆಂದು ನಂಬಿದ್ದ ಸಾಮಾನ್ಯ ಜನತೆ (ಮುಖ್ಯವಾಗಿ ದಕ್ಷಿಣದಲ್ಲಿ) ತನ್ನ ಭ್ರಮನಿರಸನವನ್ನು ವಿವಿಧ ಬಗೆಯಲ್ಲಿ ವ್ಯಕ್ತ ಪಡಿಸತೊಡಗಿದಾಗ ಅನಿವಾರ್ಯವಾಗಿ ಕಾಂಗ್ರೆಸ್ ಪಕ್ಷ ವಿಷಯವನ್ನು ಪ್ರಧಾನಿ ನೆಹರೂ, ಉಪಪ್ರಧಾನಿ ವಲ್ಲಭ ಭಾಯಿ ಪಟೇಲ್ ಹಾಗೂ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟಂಡನ್ ಅವರ ತ್ರಿಸದಸ್ಯ ಸಮಿತಿಗೊಪ್ಪಿಸಿತು. ಭಾಷಾವಾರು ಪ್ರಾಂತ್ಯಗಳ ರಚನೆಯ ಪರವಾದ ನಿಲುವನ್ನು ತೆಗೆದುಕೊಂಡ ಈ ಸಮಿತಿ ಕಾಂಗ್ರೆಸ್‌ನ ನೀತಿಯ ಮತ್ತೊಂದು ತಿರುವಿಗೆ ಸಾಕ್ಷಿಯಾಯಿತು. ಆದರೆ ಅದನ್ನು ಜಾರಿಗೊಳಿಸಲು ಸರಕಾರ ಸಿದ್ಧವಿರಲಿಲ್ಲ.

ಕೊನೆಗೂ ಸರಕಾರದ ನೀತಿ ಬದಲಾದದ್ದು 1952ರಲ್ಲಿ ಆಂಧ್ರ ಪ್ರದೇಶದ ಬೇಡಿಕೆ ತಾರಕಕ್ಕೇರಿ ಪೊಟ್ಟಿ ಶ್ರೀರಾಮುಲು ಅಮರಣಾಂತ ಉಪವಾಸ ಕೈಗೊಂಡು ಜೀವ ನೀಗಿದಾಗ ಮತ್ತು ಆ ದುರಂತ ಹಬ್ಬಿಸಿದ ಅಶಾಂತಿ ತಾರಕಕ್ಕೇರಿದಾಗ. ಪರಿಣಾಮವಾಗಿ ಮರುವರ್ಷವೇ ಮದ್ರಾಸ್ ಪ್ರೆಸಿಡೆನ್ಸಿಯಿಂದ ತೆಲುಗು ಪ್ರದೇಶಗಳನ್ನು ಪ್ರತ್ಯೇಕಿಸಿ ಆಂಧ್ರವನ್ನು ನಿರ್ಮಿಸಿದಾಗ ದೇಶದ ಮೊಟ್ಟಮೊದಲ ಭಾಷಾವಾರು ರಾಜ್ಯ ನಿರ್ಮಾಣವಾಯಿತು. ಅದರೊಂದಿಗೆ, ಜಲಾಶಯದ ದ್ವಾರಗಳನ್ನು ತೆರೆದಂತಾಗಿ, ಫಜಲ್ ಆಲಿ ಸಮಿತಿಯ ಸಕಾರಾತ್ಮಕ ಸಲಹೆಯೊಂದಿಗೆ, ಭಾಷಾವಾರು ರಾಜ್ಯಗಳು ಒಂದರ ಹಿಂದೊಂದು ಸೃಷ್ಟಿಯಾಗತೊಡಗಿದವು. ಇದು ಅರವತ್ತರ ದಶಕದಲ್ಲೂ ಮುಂದುವರೆದು ಭಾಷೆಯ ಆಧಾರದ ಮೇಲೆ ಬಾಂಬೆ ಮತ್ತು ಪಂಜಾಬ್ ರಾಜ್ಯಗಳು ವಿಭಜನೆಗೊಂಡು ಗುಜರಾತೀ ಭಾಷಿಕ ಗುಜರಾತ್ ಮತ್ತು ಹಿಂದಿ ಭಾಷಿಕ ಹರ್ಯಾಣ ರಚನೆಯಾದವು.

ಅನಂತರದ ಇತಿಹಾಸ ಹೇಳುವುದೇನೆಂದರೆ ಭಾಷಾವಾರು ರಾಜ್ಯಗಳು ದೇಶದ ಸುರಕ್ಷೆಗೆ, ಅಖಂಡತೆಗೆ ಯಾವ ಭಂಗವನ್ನೂ ತರಲಿಲ್ಲ. ಅಂತಹ ಅಪಾಯ ಎದುರಾದ ಪೂರ್ವೋತ್ತರದಲ್ಲಿ, ಪಂಜಾಬ್‌ನಲ್ಲಿ ಕಾಶ್ಮೀರದಲ್ಲಿ ಪ್ರತ್ಯೇಕತೆಯ ಕೂಗಿನ ಹಿಂದಿದ್ದದ್ದು ಜನಾಂಗೀಯತೆ ಹಾಗೂ ಧರ್ಮ, ಭಾಷೆ ಅಲ್ಲ. ಈ ನಿಟ್ಟಿನಲ್ಲಿ ಸ್ವತಂತ್ರ ಭಾರತದ ಅನುಭವವನ್ನು ಅದರಷ್ಟೇ ಇತಿಹಾಸವುಳ್ಳ ಪಾಕಿಸ್ತಾನದ ಅನುಭವದೊಂದಿಗೆ ಹೋಲಿಸುವ ಅಗತ್ಯವಿದೆ. ಭಾರತ ಯೂರೋಪಿನ ಹಾಗೂ ಪೂರ್ವ ಏಶಿಯಾದ ಹಲವಾರು ದೇಶಗಳಂತೆ ಏಕ ಜನಾಂಗೀಯ ದೇಶವಲ್ಲ. ಹೀಗಾಗಿಯೇ ಇಲ್ಲಿ ಜನಾಂಗಗಳ ನಡುವೆ ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಆಗಾಗ ತಿಕ್ಕಾಟ ಉಂಟಾಗುವುದು ಸಹಜ. ಆದಾಗ್ಯೂ, ತಿಕ್ಕಾಟಗಳ ನಡುವೆಯೇ ಸಹಬಾಳ್ವೆ ನಡೆಸುವ ಕಲೆಯನ್ನು ಈ ದೇಶದ ಜನಾಂಗಗಳು ಕಳೆದ ಎರಡು ಸಹಸ್ರಮಾನಗಳಲ್ಲಿ ರೂಢಿಸಿಕೊಂಡಿವೆ. ಈ ಸಹಬಾಳ್ವೆ ಕಳೆದ ಶತಮಾನದಲ್ಲಿ ರಾಜಕೀಯ ರೂಪವನ್ನೂ ಪಡೆದುಕೊಂಡಿತು. ವಿವಿಧ ಜನಾಂಗಗಳ ನಡುವೆ ಇಂತಹ ಸಹಬಾಳ್ವೆ ಸಾಧ್ಯವಾಗದಿದ್ದರೆ ಈಗ ಭಾರತವೆನಿಸಿಕೊಳ್ಳುತ್ತಿರುವ ಭೂಭಾಗದಲ್ಲಿ ಅನೇಕ ಸ್ವತಂತ್ರ ದೇಶಗಳಿರುತ್ತಿದ್ದವು. ವಿವಿಧ ಜನಾಂಗಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಪರಿಗಣಿಸಿದ ಭಾರತೀಯ ಕಮ್ಯೂನಿಸ್ಟ್ ಪಕ್ಷ ತನ್ನ ಭಾರತ ಸಾಮ್ರಾಜ್ಯವನ್ನು ಹದಿನೇಳು ಸ್ವತಂತ್ರ ದೇಶಗಳನ್ನಾಗಿ ವಿಭಜಿಸಿ ಸ್ವಾತಂತ್ರ್ಯ ನೀಡುವಂತೆ ಬ್ರಿಟನ್ನಿಗೆ ಮನವಿ ಮಾಡಿಕೊಂಡಿತ್ತು. ಆದರೆ ಅದರ ವಾದವನ್ನು ತಳ್ಳಿಹಾಕಿದ ಬ್ರಿಟಿಷರು ತಾವು ಇಲ್ಲಿಂದ ಕಾಲ್ತೆಗೆದ ಮೇಲೂ ಹಿಂದೂಮಹಾಸಾಗರದತ್ತ ರಶಿಯನ್ನರ ಮುಂದೊತ್ತುವಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಈ ಪ್ರದೇಶದಲ್ಲಿ ಕೇವಲ ಎರಡು ಬಲಿಷ್ಠ ರಾಜಕೀಯ ವ್ಯವಸ್ಥೆಗಳಿರಬೇಕೆಂದು ತೀರ್ಮಾನಿಸಿ ಅದರಂತೆ ಸ್ವತಂತ್ರ ಭಾರತ ಮತ್ತು ಪಾಕಿಸ್ತಾನಗಳನ್ನು ಸೃಷ್ಟಿಸಿದರು. ಅಪರಿಮಿತ ಭಿನ್ನತೆಯ ಒತ್ತಡವನ್ನು ತಾಳಿಕೊಳ್ಳಲಾಗದ ಪಾಕಿಸ್ತಾನ 1971ರಲ್ಲಿ ಇಬ್ಭಾಗವಾಯಿತು. ಒಂದೇ ರಾಜಕೀಯ ವ್ಯವಸ್ಥೆಯಲ್ಲಿ ಸಹಬಾಳ್ವೆ ನಡೆಸಲು ಪಾಕಿಸ್ತಾನೀ ಪಂಜಾಬಿಗಳು ಮತ್ತು ಬಂಗಾಲಿಗಳು ನಿರಾಕರಿಸಿದರೆ ಭಾರತದ ಪಂಜಾಬಿಗಳು ಮತ್ತು ಬಂಗಾಲಿಗಳು ಅಂತಹ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದಾರೆ. ಇದಕ್ಕಿರುವ ಕಾರಣ ಒಂದೇ. ಭಾರತದ ಪಂಜಾಬಿಗಳು ಮತ್ತು ಬಂಗಾಲಿಗಳ ನಡುವೆ ಅದೆಷ್ಟೇ ವ್ಯತ್ಯಾಸಗಳಿದ್ದರೂ ಈ ಎರಡೂ ಜನಾಂಗಗಳು ತಮ್ಮ ನಡುವಿನ ವಿಶಾಲ ಭೂಭಾಗದಲ್ಲಿ ನೆಲೆಸಿರುವ, ತಮಗೆ ಸಾಂಸ್ಕೃತಿಕವಾಗಿ ಹತ್ತಿರವೆನಿಸಿದ ಜನಾಂಗಗಳ ಮೂಲಕ ಒಂದಾಗಿ ಬೆಸೆಯಲ್ಪಟ್ಟಿದ್ದಾರೆ. ಇದು ಭಾರತದ ಇನ್ನಿತರ ಜನಾಂಗಳಿಗೂ ಅನ್ವಯಿಸುತ್ತದೆ. ಇಂತಹ ಭೌಗೋಳಿಕ ಹಾಗೂ ಸಾಂಸ್ಕೃತಿಕ 'ಬೆಸುಗೆ' ಭಾರತದ ವಿವಿಧ ಜನಾಂಗಳ ನಡುವೆ ಅಸ್ತಿತ್ವದಿಂದಿರುವುದರಿಂದಲೇ ಈ ದೇಶ ಒಂದೇ ರಾಜಕೀಯ ವ್ಯವಸ್ಥೆಯಾಗಿ ಉಳಿದಿದೆ. ಅಂತಹ 'ಬೆಸುಗೆ' ಪಾಕಿಸ್ತಾನೀ ಪಂಜಾಬ್ ಮತ್ತು ಬಂಗಾಲದ ನಡುವೆ ಇಲ್ಲದಿದ್ದುದೇ ಆ ದೇಶ ಛಿದ್ರವಾಗಲು ಕಾರಣ. ಈಗಿನ ಪಾಕಿಸ್ತಾನದಲ್ಲಿನ ನಾಲ್ಕು ಪ್ರಮುಖ ಜನಾಂಗಗಳ ನಡುವೆ ಭಿನ್ನತೆ ಇದ್ದರೂ ಆ ಭಿನ್ನತೆ ಅವರೆಲ್ಲರೊಡನೆ ಪೂರ್ವ ಪಾಕಿಸ್ತಾನದ ಬಂಗಾಳಿಗಳಿಗಿದ್ದಷ್ಟು ಆಳವಾಗಿಲ್ಲ. ಅಲ್ಲದೇ ಭಾರತದ ವಿವಿಧ ಜನಾಂಗಗಳ ನಡುವೆ ಇರುವಂತೆ ಈಗಿನ ಪಾಕಿಸ್ತಾನದ ನಾಲ್ಕು ಜನಾಂಗಗಳ ನಡುವೆ ಭೌಗೋಳಿಕ ಹಾಗೂ ಸಾಂಸ್ಕೃತಿಕ ಬೆಸುಗೆ ಇದೆ. ಈ ಬೆಸುಗೆಯಿಂದಾಗಿಯೇ ಅಲ್ಲಿನ ಪಂಜಾಬಿಗಳು, ಬಲೂಚಿಗಳು, ಸಿಂಧಿಗಳು ಹಾಗೂ ಪಖ್ತೂನಿಗಳ ನಡುವೆ (ನಮ್ಮಲ್ಲಿ ತಮಿಳರು, ಕನ್ನಡಿಗರು, ಮಹಾರಾಷ್ಟ್ರೀಯರು–ಇತ್ಯಾದಿಗಳ ನಡುವೆ ಇರುವಂತೆ) ಭಿನ್ನತೆ ಇದ್ದರೂ ಅದು ಪಾಕಿಸ್ತಾನದ ರಾಜಕೀಯ ಏಕತೆಗೆ ಮಾರಕವಾಗುವ ಮಟ್ಟದಲ್ಲಿಲ್ಲ. ಆದರೂ, ಆ ಭಿನ್ನಾಭಿಪ್ರಾಯಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳುವ ಅವಕಾಶವಿದ್ದರೂ ಆ ದೇಶ ಸಂಧಾನಕ್ಕಿಂತಲೂ ಸೇನೆಯನ್ನು ಹೆಚ್ಚಾಗಿ ಬಳಸುತ್ತದೆ. ಆದರೆ ಇಂತಹ ಭಿನ್ನಾಭಿಪ್ರಾಯಗಳನ್ನು ಮಾತುಕತೆಗಳ ಮೂಲಕ, ಗಡಿಗಳ ಮರುಹೊಂದಾಣಿಕೆಯ ಮೂಲಕ ಅಥವಾ ಅಗತ್ಯವಿದ್ದರೆ ರಾಜ್ಯಗಳನ್ನು ವಿಭಜಿಸಿ ಹೊಸ ರಾಜ್ಯಗಳನ್ನು ಸೃಷ್ಟಿಸುವ ಮೂಲಕ ಪರಿಹರಿಸಿಕೊಳ್ಳುವುದು ಭಾರತ ರೂಢಿಸಿಕೊಂಡು ಬಂದಿರುವ ಸಂಪ್ರದಾಯ. ತೆಲಂಗಾಣದ ಸೃಷ್ಟಿಯನ್ನು ಈ ಹಿನ್ನೆಲೆಯಲ್ಲಿ ನಾವು ಅರ್ಥೈಸಬೇಕು.

**ಭಾರತ ಯೂರೋಪಿನ ಹಾಗೂ ಪೂರ್ವ ಏಶಿಯಾದ ಹಲವಾರು ದೇಶಗಳಂತೆ ಏಕ ಜನಾಂಗೀಯ ದೇಶವಲ್ಲ. ಹೀಗಾಗಿಯೇ ಇಲ್ಲಿ ಜನಾಂಗಗಳ ನಡುವೆ ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಆಗಾಗ ತಿಕ್ಕಾಟ ಉಂಟಾಗುವುದು ಸಹಜ.**

ರಾಜ್ಯಗಳ ರಚನೆಯ ಬಗ್ಗೆ ಐವತ್ತು ಅರವತ್ತರ ದಶಕಗಳಲ್ಲಿ ತಾರಕಕ್ಕೇರಿದ್ದ ಭಾಷೆಯ ಮೋಹವೂ ನಿಧಾನವಾಗಿ ಕರಗುತ್ತಾ ಹೋದ ಪ್ರಕ್ರಿಯೆಯೂ ಗಮನಿಸಬೇಕಾದ ಅಂಶ. ಎರಡು ದಶಕಗಳಿಗೂ ಹಿಂದೆ ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಬಿಹಾರಗಳ ವಿಭಜನೆಯ ಕೂಗೆದ್ದು ಹದಿನಾರು ವರ್ಷಗಳ ಹಿಂದೆ ಉತ್ತರಾಖಂಡ, ಜಾರ್ಖಂಡ್ ಹಾಗೂ ಛತ್ತೀಸ್‌ಘರ್ ಉದಯವಾದದ್ದರ ಹಿಂದಿದ್ದದ್ದು ಬಹುಪಾಲು ಆರ್ಥಿಕ ಕಾರಣಗಳು. ಆದರೆ ಈ ರಾಜ್ಯಗಳು (ಪ್ರಾಂತ್ಯಗಳ ರೂಪದಲ್ಲಿ)



ಸ್ವಾತಂತ್ರ್ಯದ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ಕಾರಣದಿಂದ ಹಾಗೂ ಅವುಗಳ ರಚನೆಯಲ್ಲಿ ಭಾಷೆಯ ಪಾತ್ರವಿಲ್ಲದ್ದರಿಂದ ಅವುಗಳ ವಿಭಜನೆಗೆ ಕಾರಣ ಭಾಷೆಯ ಬೆಸುಗೆಯ ಸಾಮರ್ಥ್ಯದಲ್ಲುಂಟಾದ ಕುಸಿತ ಎಂದು ವಾದಿಸಲಾಗದು. ಆದರೀಗ ಮೊಟ್ಟಮೊದಲ ಭಾಷಾವಾರು ಪ್ರಾಂತ್ಯ ವಿಭಜನೆಗೊಳ್ಳುತ್ತಿರುವ ಸಂದರ್ಭದಲ್ಲಿ ಜನತೆಯನ್ನು ಒಂದಾಗಿರಿಸುವವಲ್ಲಿ ಭಾಷೆಯ ವಿಫಲತೆಯನ್ನು ಕಡೆಗಣಿಸಲು ಸಾಧ್ಯವಾಗುವುದಿಲ್ಲ. ಭಾಷೆಗಿಂತಲೂ ಆರ್ಥಿಕ ಹಿತಾಸಕ್ತಿಗಳು ನಮ್ಮ ಚಿಂತನೆಯಲ್ಲಿ ಮುಂಚೂಣಿಗೆ ಬರುತ್ತಿರುವುದನ್ನೂ ನಿರಾಕರಿಸಲಾಗುವುದಿಲ್ಲ. ಇದು ದಿನೇದಿನೇ ಪ್ರಬಲವಾಗುವ ಸೂಚನೆಯನ್ನು ಕೊಂಗುನಾಡು (ವಾಯುವ್ಯ ತಮಿಳುನಾಡು), ವಿದರ್ಭ (ಪೂರ್ವ ಮಹಾರಾಷ್ಟ್ರ) ನೀಡತೊಡಗಿವೆ. ಹಾಗೆಂದ ಮಾತ್ರಕ್ಕೆ ಈ ಹೊಸರಾಜ್ಯಗಳು ಅತಿ ಶೀಘ್ರದಲ್ಲೇ ಸೃಷ್ಟಿಯಾಗುತ್ತವೆ ಎಂದರ್ಥವಲ್ಲ. ಇವು ಅಸ್ತಿತ್ವಕ್ಕೆ ಬರಬಹುದು ಅಥವಾ ಬಾರದೆಯೂ ಇರಬಹುದು. ತೆಲಂಗಾಣದ ಜನರ ದೃಢನಿಶ್ಚಯ ಹಾಗೂ ಹೋರಾಟ ಮನೋಭಾವ ಈ ಜನರಲ್ಲಿಲ್ಲ. ಹಾಗೆಂದು ಆ ಪ್ರದೇಶಗಳಲ್ಲಿ ಆರ್ಥಿಕತೆ ಗಳಿಸಿಕೊಳ್ಳುತ್ತಿರುವ ಪ್ರಾಮುಖ್ಯತೆಯನ್ನೂ ಅಲ್ಲಗಳೆಯಲಾಗುವುದಿಲ್ಲ. ಹಾಗೆಯೇ ಭಾಷಾಮೋಹಕ್ಕಿಂತಲೂ ಆರ್ಥಿಕ ಹಿತಾಸಕ್ತಿ ಪ್ರಮುಖವಾಗಿ ಹೊಸರಾಜ್ಯಗಳ ಬೇಡಿಕೆಗಳಿಗೆ ಅಗತ್ಯ ಜನಮನ್ನಣೆ ಸಿಗದೇಹೋಗುವ ಆಸಕ್ತಿಕರ ಬೆಳವಣಿಗೆಯನ್ನು ಪ್ರತ್ಯೇಕ ತುಳುನಾಡು ಮತ್ತು ಕೊಡಗಿನ ಬಗ್ಗೆ ಅಲ್ಲಿನ ಜನತೆ ವ್ಯಕ್ತಪಡಿಸಿರುವ ನಿರಾಸಕ್ತಿಯಲ್ಲಿ ಕಾಣಬಹುದು.

ಭಾಷೆಯ ಮೋಹಕತೆ ಇಳಿಕೆಯಾಗಿ ಆರ್ಥಿಕ ಹಿತಾಸಕ್ತಿಗಳು ಜನತೆಯ ಚಿಂತನೆಯಲ್ಲಿ ಮುಂಚೂಣಿಗೆ ಬರುವ ಈ ಪ್ರಕ್ರಿಯೆ ಹೀಗೇ ಮುಂದುವರೆಯುತ್ತಾ ಹೋದರೆ ರಾಷ್ಟ್ರದ ಸಾಂಸ್ಕೃತಿಕ ಬದುಕಿನ ಮೇಲೆ ಅದರ ಪರಿಣಾಮವೇನು? ಹೇಳಿಕೇಳಿ ಹಣಕ್ಕೂ ಭಾವನಾತ್ಮಕತೆಗೂ ಎಣ್ಣೆ–ಸೀಗೇಕಾಯಿ ಸಂಬಂಧ. ಮನುಷ್ಯನ ಹಣದ ಮೋಹವನ್ನು ವಿವರಿಸುತ್ತಾ ವಾಸ್ತವವಾದಿ ಮೆಕಿಯಾವೆಲ್ಲಿ "ವ್ಯಕ್ತಿಯೊಬ್ಬ ತನ್ನ ತಂದೆಯ ಹಂತಕನನ್ನು ಕ್ಷಮಿಸಬಹುದು, ಆದರೆ ತನ್ನ ಆಸ್ತಿಯನ್ನು ಕಸಿದುಕೊಂಡವನನ್ನು ಕ್ಷಮಿಸಲಾರ" ಎಂದು ಐದು ಶತಮಾನಗಳ ಹಿಂದೆಯೇ ಹೇಳಿದ್ದಾನೆ.

ಹಾಗೆ ನೋಡಿದರೆ ರಾಜ್ಯವೊಂದರ ವಿಭಜನೆ ಸಾಂಸ್ಕೃತಿಕ ಬದುಕಿಗೆ ಪೆಟ್ಟು ನೀಡಿದ್ದನ್ನು ಅರವತ್ತು ವರ್ಷಗಳ ಹಿಂದೆ ಆಂಧ್ರ ಪ್ರದೇಶದ ಸ್ಥಾಪನೆಯಲ್ಲೇ ಗುರುತಿಸಬಹುದು. ಫೋರ್ಟ್ ಸ್ಯೆಂಟ್ ಜಾರ್ಜ್ ಅನ್ನು ಮದ್ರಾಸ್ ಆಗಿ ಬೆಳೆಸಿದ್ದರಲ್ಲಿ ತಮಿಳರಿಗಿಂತಲೂ ತೆಲುಗರ ಪಾತ್ರ ಹಿರಿದು. ಹೀಗಾಗಿಯೇ ಆ ನಗರಕ್ಕಾಗಿ ಅವರು ಹೋರಾಡಿದ್ದು. ಆದರೆ ಅದು ವಿಫಲವಾಗಿ ಮದ್ರಾಸ್ ತಮಿಳರ ಕೈಗೆ ಬಿದ್ದಾಗ ತೆಲುಗು ಸಾಂಸ್ಕೃತಿಕ ಲೋಕಕ್ಕಾದ ಹಾನಿ ಅಪಾರ. ತಮ್ಮ



**ಮೊಟ್ಟಮೊದಲ ಭಾಷಾವಾರು ಪ್ರಾಂತ್ಯ ವಿಭಜನೆಗೊಳ್ಳುತ್ತಿರುವ ಸಂದರ್ಭದಲ್ಲಿ ಜನತೆಯನ್ನು ಒಂದಾಗಿರಿಸುವವಲ್ಲಿ ಭಾಷೆಯ ವಿಫಲತೆಯನ್ನು ಕಡೆಗಣಿಸಲು ಸಾಧ್ಯವಾಗುವುದಿಲ್ಲ. ಭಾಷೆಗಿಂತಲೂ ಆರ್ಥಿಕ ಹಿತಾಸಕ್ತಿಗಳು ನಮ್ಮ ಚಿಂತನೆಯಲ್ಲಿ ಮುಂಚೂಣಿಗೆ ಬರುತ್ತಿರುವುದನ್ನೂ ನಿರಾಕರಿಸಲಾಗುವುದಿಲ್ಲ.**

ಚಲನಚಿತ್ರ ನಿರ್ಮಾಣ ಕೇಂದ್ರಗಳು, ಸಂಗೀತ ಕೇಂದ್ರಗಳು ಮತ್ತಿತರ ಸಾಂಸ್ಕೃತಿಕ ಕೇಂದ್ರಗಳನ್ನು ಮದ್ರಾಸ್‌ನಿಂದ ತಮ್ಮ ಮೊದಲ ರಾಜಧಾನಿ ಕರ್ನೂಲ್‌ಗೆ ವರ್ಗಾಯಿಸಿಕೊಳ್ಳಲು ಅವರಿಗೆ ಸಾಧ್ಯವಾಗಲೇ ಇಲ್ಲ. 1956ರಲ್ಲಿ ಹೈದರಾಬಾದ್ ಸಂಸ್ಥಾನ ವಿಭಜನೆಗೊಂಡು ತೆಲಂಗಾಣ ಪ್ರದೇಶ ಆಂಧ್ರಕ್ಕೆ ದಕ್ಕಿ ಐತಿಹಾಸಿಕ ಹೈದರಾಬಾದ್ ನಗರ ಅವರ ರಾಜಧಾನಿಯಾದ ಮೇಲೂ ತಮ್ಮೆಲ್ಲಾ ಸಾಂಸ್ಕೃತಿಕ ಕೇಂದ್ರಗಳನ್ನು, ಸಂಕೇತಗಳನ್ನು ಆ ನಗರಕ್ಕೆ ವರ್ಗಾಯಿಸಿಕೊಳ್ಳಲು ತೆಲುಗರಿಗೆ ಬಹಳ ಕಾಲವೇ ಬೇಕಾಯಿತು. ಕೆಲವು ವಿಭಾಗಗಳಲ್ಲಿ ಅದು ಇನ್ನೂ ಪೂರ್ಣಗೊಂಡಿಲ್ಲ. ತೆಲುಗು ಸಂಸ್ಕೃತಿಯ ಹರಿಕಾರರಾದ ಕರಾವಳಿ ತೆಲುಗರು ಹೈದರಾಬಾದನ್ನು ಸಾಂಸ್ಕೃತಿಕವಾಗಿ ಈಗಿನ ಸ್ಥಿತಿಗೆ ತರುವುದರಲ್ಲಿ ದಶಕಗಳ ಕಾಲ ಶ್ರಮಿಸಿದರು. ಅವರೀಗ ಅಲ್ಲಿಂದಲೂ ಕಾಲು ತೆಗೆಯಬೇಕಾದ ಪರಿಸ್ಥಿತಿಯೊದಗಿದೆ. ಹೈದರಾಬಾದ್ ನಗರ ಮುಂದಿನ ಹತ್ತು ವರ್ಷಗಳವರೆಗೆ ಎರಡೂ ರಾಜ್ಯಗಳಿಗೆ ರಾಜಧಾನಿಯಾಗಿರಬೇಕೆಂಬ ಕಾಂಗ್ರೆಸ್ ಪಕ್ಷದ ವಾದ ವ್ಯಾವಹಾರಿಕವಲ್ಲ. ಯಾಕೆಂದರೆ ಆಂಧ್ರದ ಗಡಿಯಿಂದ ಹೈದರಾಬಾದ್ ನಗರ ಕನಿಷ್ಠ ಇನ್ನೂರು ಕಿಲೋಮೀಟರ್ ದೂರದಲ್ಲಿದೆ. ಅಂದರೆ ತಮ್ಮದಲ್ಲದ ನೆಲದಲ್ಲಿ ಆಂಧ್ರದ ಜನ ತಮ್ಮ ರಾಜಧಾನಿಯನ್ನು ಹೊಂದುವುದು, ಅಲ್ಲಿಂದ ಆಡಳಿತ ನಡೆಸುವುದು ಕನಸಿನ ಮಾತು. ಆಂಧ್ರ ಮತ್ತು ರಾಯಲಸೀಮೆಯ ತೆಲುಗರು ಹೈದರಾಬಾದನ್ನು ಬಿಟ್ಟು ಹೊರಡಬೇಕೆಂದು ತೆಲಂಗಾಣ ರಾಷ್ಟ್ರೀಯ ಸಮಿತಿಯ ಅಧ್ಯಕ್ಷ ಕೆ. ಚಂದ್ರಶೇಖರ ರಾವ್ ಹೇಳಿರುವುದು ಪರಿಸ್ಥಿತಿಯ ಒಂದು ಚಿತ್ರಣ ನೀಡುತ್ತದೆ. ಅಂದರೆ ಆಂಧ್ರದ ತೆಲುಗರು ಮೊದಲು ಮದ್ರಾಸ್, ಈಗ ಹೈದರಾಬಾದನ್ನೂ ತೊರೆದು ಮತ್ತೊಂದು ರಾಜಕೀಯ, ಸಾಂಸ್ಕೃತಿಕ ಕೇಂದ್ರವನ್ನು ಹುಡುಕಿ ನಿರ್ಮಿಸಿಕೊಳ್ಳಬೇಕಾದ ದುರ್ಗತಿಗೀಡಾಗಿದ್ದಾರೆ.

ಇಂತಹದೇ ಪರಿಸ್ಥಿತಿಯನ್ನು ಬಾಂಬೆ ವಿಭಜನೆಗೊಂಡಾಗ ಗುಜರಾತಿಗಳು ಅನುಭವಿಸಿದ್ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಮದ್ರಾಸ್ ನಗರವನ್ನು ತೆಲುಗರು ಕಟ್ಟಿದ್ದಂತೆ ಮುಂಬೈ ನಗರದ ನಿರ್ಮಾಣದಲ್ಲಿ ಗುಜರಾತಿಗಳ ಪಾತ್ರ ಅದ್ವಿತೀಯ. ಆ ನಗರ ಅವರ ಸಾಂಸ್ಕೃತಿಕ ಕೇಂದ್ರವೂ ಸಹಾ. ಆದರೆ ತಮ್ಮದೇ ಭಾಷೆಯ ರಾಜ್ಯವನ್ನು ಪಡೆದುಕೊಳ್ಳುವ ಸಂತೋಷದಲ್ಲಿ ಮುಂಬೈ ನಗರವನ್ನು ಕಳೆದುಕೊಳ್ಳಬೇಕಾದ ದುಃಖವನ್ನು ಅವರು ಅನುಭವಿಸಬೇಕಾಯಿತು. ಅನಂತರ ತನ್ನ ಕಾಸ್ಮೋಪಾಲಿಟನ್ ಸಂಸ್ಕೃತಿಯಿಂದಾಗಿ ಮುಂಬೈ ಹಲವಾರು ದಶಕಗಳ ಕಾಲ ಗುಜರಾತೀ ಸಂಸ್ಕೃತಿಯನ್ನು ಸಲಹಿದರೂ ಆಮೇಲಾಮೇಲೆ ಶಿವಸೇನೆ ಮತ್ತು ಎಂಎನ್‌ಎಸ್ ಅವಾಂತರದಲ್ಲಿ ಗುಜರಾತಿಗಳಲ್ಲಿ ಪರಕೀಯತೆ ಮೂಡತೊಡಗಿತು.

ಹಳೇ ಮೈಸೂರಿಗರ ಮಲತಾಯಿ ಧೋರಣೆಯಿಂದ ಉತ್ತರ ಕರ್ನಾಟಕದಲ್ಲಿ ಅಸಂತೋಷ ಹೊಗೆಯಾಡತೊಡಗಿದ ಹಿನ್ನೆಲೆಯಲ್ಲಿ ಮೂವತ್ತೈದು ವರ್ಷಗಳ ಹಿಂದೆಯೇ ಬಸವರಾಜ ಕಟ್ಟೀಮನಿಯವರು ಹೊಸ ರಾಜ್ಯದ ನಿರ್ಮಾಣದ ಪ್ರಸ್ತಾಪ ಮಾಡಿದ್ದರು. ಬೆಳಗಾವಿಯನ್ನು ಉತ್ತರ ಕರ್ನಾಟಕ ರಾಜ್ಯದ ರಾಜಧಾನಿಯನ್ನಾಗಿಸುವ ಮೂಲಕ ಗಡಿಸಮಸ್ಯೆಯನ್ನೂ ಪರಿಹರಿಸಬಹುದೆಂದು ಅವರು ವಾದಿಸಿದ್ದರು. ಕಳೆದ ದಶಕದಲ್ಲಿ ಉತ್ತರ ಕರ್ನಾಟಕದ ಕೆಲವು ರಾಜಕಾರಣಿಗಳು ಪ್ರತ್ಯೇಕ ರಾಜ್ಯದ ಕೂಗೆತ್ತಿದರೂ ಅದು ತೀವ್ರಗೊಳ್ಳಲಿಲ್ಲ. ತೆಲಂಗಾಣ ನಿರ್ಮಾಣದ ನಂತರ ಪರಿಸ್ಥಿತಿ ಬೇರೆಯಾಗಬಹುದು. ಅದು ಕನ್ನಡ ಸಂಸ್ಕೃತಿಯ ಕೇಂದ್ರ ಧಾರವಾಡವನ್ನು ಒಂದು ರಾಜ್ಯಕ್ಕೂ, ಕನ್ನಡಿಗರ ವಾಣಿಜ್ಯ ಕೇಂದ್ರ ಬೆಂಗಳೂರನ್ನು ಮತ್ತೊಂದು ರಾಜ್ಯಕ್ಕೂ ನೀಡುವಂತಾದರೆ ಅದು ಕನ್ನಡ ಸಂಸ್ಕೃತಿಯ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಬೆಂಗಳೂರಿನಲ್ಲಿ ಈಗಾಗಲೇ ಜಾರಿಯಲ್ಲಿರುವ ಕನ್ನಡ ಸಂಸ್ಕೃತಿ ಮರೆಯಾಗುವಿಕೆ ವೇಗ ಪಡೆದುಕೊಳ್ಳಬಹುದು, ಹಾಗೆಯೇ ಆರ್ಥಿಕ ಬೆಂಬಲ ಕುಸಿಯುವ ಕಾರಣದಿಂದಾಗಿ ಧಾರವಾಡದಲ್ಲಿ ಕನ್ನಡ ಸಂಸ್ಕೃತಿಯ ಬೆಳವಣಿಗೆ ಕುಂಠಿತವಾಗಬಹುದು. ಅಂದರೆ ಬೆಂಗಳೂರಿನಲ್ಲಿ ಹಣವಿರುತ್ತದೆ, ಕನ್ನಡ ಸಂಸ್ಕೃತಿ ಮರೆಯಾಗುತ್ತದೆ. ಧಾರವಾಡದಲ್ಲಿ ಕನ್ನಡ ಸಂಸ್ಕೃತಿಯಿರುತ್ತದೆ, ಆದರೆ ಅದರ ಬೆಳವಣಿಗೆಗೆ ಅಗತ್ಯವಾದ ಆರ್ಥಿಕ ಬೆಂಬಲವಿರುವುದಿಲ್ಲ. ಅಂದರೆ ಒಂದು ಅರ್ಥದಲ್ಲಿ "ಹಲ್ಲಿರುವವನಿಗೆ ಕಡಲೆಯಿಲ್ಲ, ಕಡಲೆ ಇರುವವನಿಗೆ ಹಲ್ಲಿಲ್ಲ" ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಅ

ಜೀವನದ ಕಟುಸತ್ಯಗಳಲ್ಲಿ ವೃದ್ಧಾಪ್ಯವೂ ಒಂದು. ಇದರಿಂದ ಯಾರಿಗೂ ಮುಕ್ತಿಯಿಲ್ಲ. ಒಂದು ರೀತಿಯಲ್ಲಿ ಇದಕ್ಕೆ ತಬ್ಬಲಿತನವನ್ನು ತರುವ ವಯಸ್ಸೆಂದೂ ಸಹ ಹೇಳಬಹುದು. ಕಾರಣ ಹಕ್ಕಿಯ ಮರಿಗಳ ರೆಕ್ಕೆಗಳು ಬಲಿತು ಸಂಗಾತಿಯೊಂದಿಗೆ ಬಾನಲ್ಲಿ ಸ್ವಚ್ಛಂದದಿಂದ ಹಾರಾಡುವಾಗ ಮನೆಯಲ್ಲಿ ಕಡಿವಾಣ ಹಾಕುವ ವೃದ್ಧರ ಇರುವು ಸ್ವಲ್ಪ ಇರಿಸು ಮುರಿಸಾಗುತ್ತದೆ.

ಮುಪ್ಪಿನಲ್ಲಿ ಮಾನಸಿಕ ಪ್ರಕ್ರಿಯೆಗಳು ನಿಧಾನವಾಗಿ ನೆನಪು ಕುಂದುವುದರ ಜೊತೆಗೆ ಹೊಸ ಕಲಿಕೆಯ ಸಾಮರ್ಥ್ಯ ಮತ್ತು ಏಕಾಗ್ರತೆ ಕಡಿಮೆಯಾಗುತ್ತದೆ. ಕೆಲವೊಮ್ಮೆ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಮನಸ್ಸೊಪ್ಪದೇ ಇರಬಹುದು. ಸಂಗಾತಿಯ ಅಥವಾ ಸ್ನೇಹಿತರ ಸಾವಿನಿಂದ ಒಂಟಿತನ ಕಾಡುವುದರ ಜೊತೆಗೆ ತನ್ನ ಸಾವಿನ ಬಗೆಗೂ ಭಯ ಶುರುವಾಗುತ್ತದೆ.

**ನಿಮಗೂ ಜೀವಿಸುವ ಹಕ್ಕಿದೆ!**

ಮೊನ್ನೆ ಮಾರ್ಕೆಟಿನಲ್ಲಿ ಒಬ್ಬ ವಯಸ್ಸಾದ ಹಿರಿಯರು ಹರಕು ಮುರುಕು ಹಿಂದಿಯಲ್ಲಿ “ಅರೇ ಕ್ಯಾ ಭಯ್ಯಾ? ಪ್ಯಾಜ್ ಇತನಾ ಮೆಹಂಗಾ ಹೋಗಯಾ ಕ್ಯಾ? ಹಾಂ. 75 ರೂಪೈ ಕೋ ಸಿರ್ಫ್ ಏಕೀ ಕಿಲೋನಾ?”

“ಅರೇ ಬಾಬೂಜಿ. ಏ ಖಿಲೋನಾ ನಹೀ ಹೈ.. ಪ್ಯಾಜ್ ಹೈ ಪ್ಯಾಜ್. ಹಹಹ. ಆಜ್ ಹೀ ಆಯೇ ಹೋ ಕ್ಯಾ? ಏ ರೇಟ್ ತೋ ಕಬ್ ಸೆ ಹೈ ಹಹಹಹ!” ಇವರ ಮಾತು ಕೇಳಿ ನಕ್ಕ ಆ ಸಬ್ಜೀವಾಲನನ್ನು ನೋಡುತ್ತಾ ಸಿಟ್ಟಿನಿಂದ “ಹಾ... ಹಾ... ಟೀಕ್ ಹೈ... ಚಲೋ ಅಬ್... ಏಕ ಕೇಜೀ ದೇ ದೊ ...” ಅಂದವರ ಮಾತು ಕೇಳಿ ನನಗೂ ನಗು ಬಂತು.

ನೋಡಿದ್ರಾ ನಮ್ಮ ದೇಶದ ಈರುಳ್ಳಿ ಡಾಲರ್‌ನ್ನೇ ಹಿಂದಕ್ಕೆ ಹಾಕಿದೆ ಅಂತ ಹೇಳಬೇಕನಿಸಿತು. ಅಷ್ಟರಲ್ಲಿ ಅವರೇ “ಅರೇ ನೀವು ರಾಗಿಣಿ ಅಲ್ವಾ?” ಅಂತ ಅಚ್ಚ ಕನ್ನಡದಲ್ಲಿ ಕೇಳಿದಾಗ “ಓ... ರಾವ್ ಅಂಕಲ್? ನೀವು?” ಎಂದೆ.

ಎಲ್ಲಕ್ಕಿಂತ ಆಶ್ಚರ್ಯ ಅಂದ್ರೆ ರಾವ್ ಅಂಕಲ್ ಎಂದೂ ಈರುಳ್ಳಿ ತಿನ್ನದ ವ್ಯಕ್ತಿ, ಇವತ್ತು ಯಾಕೆ ಈರುಳ್ಳಿ ಕೊಂಡು ಕೊಳ್ತಾ ಇದ್ದಾರೆ? ಮತ್ತೆ ಆಂಟಿ ಹೋದ ಬಳಿಕ ಇವರೂ ಸಹ ಮಕ್ಕಳ ಜೊತೆಗೆ ಅಮೇರಿಕಾಗೆ ಹೋಗಿದ್ದಾರೇಂತ ಕೇಳಿದ್ದೆ. ಮತ್ತೆ ಡೆಲ್ಲಿಗೆ ಯಾವಾಗ ಬಂದ್ರು? ಮನದಲ್ಲಿ ಹುಟ್ಟುತ್ತಿದ್ದ ಅನೇಕ ಪ್ರಶ್ನೆಗಳಿಗೆ ಕಡಿವಾಣ ಹಾಕುತ್ತಾ “ನಮಸ್ಕಾರಾ ಅಂಕಲ್, ಯಾವಾಗ ಬಂದ್ರಿ? ಹಹಹ? ಇದೇನು, ಈರುಳ್ಳಿ?” ಅಂತ ನಾನು ಅವರ ಕೈಯಲ್ಲಿ ಹಿಡಿದಿದ್ದ ಈರುಳ್ಳಿ ಚೀಲವನ್ನು ನೋಡಿದಾಗ, “ಓ... ಹಹಹಹ? ಯಾಕೆ ನಿನಗೂ ಆಶ್ಚರ್ಯ ಆಯ್ತಾ? ಸರಿ ಬಿಡು” ಅಂದ್ರು.

ಅವರ ಹಿಂದೆ ಸುಮ್ನೆ ನಡೀತಿದ್ರೂ ಮನಸ್ಸೆಲ್ಲಿ ಸುಮ್ನಿರುತ್ತೆ ಹೇಳಿ? ರಾವ್ ಆಂಟಿ ಯಾವಾಗ್ಲೂ ನಮ್ಮತ್ತೆ ಮುಂದೆ ಗೋಳಿಡ್ತಾ ಇದ್ದದ್ದು ನೆನಪಾಯ್ತು. “ನೋಡಿ ರಾಜಮ್ಮಾ, ನನ್ನ ಮಗನಿಗೆ ಪ್ರತಿಯೊಂದು ಸಬ್ಜಿಗೂ ಈರುಳ್ಳಿ ಹಾಕಿ ಮಾಡಿದ್ರೆ ಮಾತ್ರ ತಿಂತಾನೆ, ಇಲ್ಲಾಂದ್ರೆ ಆಜ್ ಸಹೀ ನಹೀ ಬನಾ ಹೈ ಅಂತಾ ಹಾಗೇ ಹೋಗಿಬಿಡ್ತಾನೆ. ಮತ್ತೆ ನಮ್ಮೆಜಮಾನ್ರಿಗೆ ಈರುಳ್ಳಿ ಅಂದ್ರೆ ಎಣ್ಣೆ ಸೀಗೇಕಾಯಿ, ಈಗ ನೀವೇ ಹೇಳಿ, ಇರೋ ಮೂವರಲ್ಲಿ ಅದೇನು ಮಾಡ ಬೇಕೂಂತ?' ಅಂತ.

ಅದೇ ಮನೆಯಾದ್ರೂ ತುಂಬಾನೇ ಬದಲಾವಣೆಗಳು ಕಂಡು ಬಂದವು. ತೋರಗೊಡದೆ, ಗಣೇಶನಿಗೆ ನಮಸ್ಕರಿಸುತ್ತಿದ್ದಾಗ “ಸುನೋತೋ, ಜರಾ ಓ ಪ್ರಸಾದ ಲಾನಾ' ಅಂತ ಕೂಗಿ ಹೇಳಿದ್ರು. ಕೆಲಸದವ ಇರಬೇಕು ಅಂತ ನಾನೂ ಸುಮ್ನಿದ್ದೆ. ಆದ್ರೆ ಒಳಗಿಂದ ಪ್ಲೇಟ್ ಹಿಡಿದು ಬಂದ ಸೌಮ್ಯ ಮುಖದ ಮಹಿಳೆಯನ್ನು ನೋಡಿ 'ಯಾರು' ಎಂದು ರಾವ್ ಅಂಕಲ್ ಕಡೆಗೆ ನೋಡಿದೆ.

'ರಾಗಿಣಿ, ಮೇಟ್ ಮೈ ವೈಫ್ ಕಮಲೇಶ್?' ಅಂದ್ರು. ನಾನೋ ಕಕ್ಕಾವಿಕ್ಕಿಯಾಗಿ ಬೆಪ್ಪಳಂತೆ ನಿಂತು ಬಿಟ್ಟೆ. ಇದನ್ನು ನೋಡಿದ ಕಮಲೇಶ್ ನಗುತ್ತ 'ಇಟ್ಸ್ ಓಕೆ, ಇನ್ಹೆ ಬತಾದೋ” ಎಂದು ನಮ್ಮ ಮುಂದೆ ಕುಳಿತರು.

ರಾವ್ ಅಂಕಲ್ ಗಂಟಲು ಸರಿಪಡಿಸುತ್ತಾ, “ಮೂರು ವರ್ಷದ ಹಿಂದೆ ಕಮಲಾ ನನ್ನ ಬಿಟ್ಟು ಹೋದ ಬಳಿಕ ಜೀವನ ಯಾಕೋ ಜಡಭರತ ಅನಿಸತೊಡಗಿತು. ಪಾಪ ನನ್ನ ಮಗ ಅಮೇರಿಕಾಗೆ ನನ್ನ ಕರೆದೊಯ್ದರೂ ಅಲ್ಲಿಯ ವಾತಾವರಣ ನನಗ್ಯಾಕೋ ಹಿಡಿಸಲೇ ಇಲ್ಲ. ನಡುವೆ ಒಮ್ಮೆ ಬೆಂಗಳೂರಿಗೂ ಬಂದಿದ್ದೆ. ಎಷ್ಟೇ ಅಂದ್ರೂ ಬೇರೆಯವರ ಮನೆ. ಯಾಕೋ ಅವರ್ಯಾರೂ ಅಷ್ಟಾಗಿ ಹಚ್ಚಿಕೊಳ್ತಾ ಇಲ್ಲಾ ಅನಿಸ್ತು. ಮತ್ತೆ ದೆಹಲಿಯ ನನ್ನ ಮನೆಗೇ ಬಂದು ಬಿಟ್ಟೆ. ಕೇಶವಾ ಪ್ರತಿ ದಿನಾ ಫೋನ್ ಮಾಡಿ ವಾಪಸ್ ಬಂದು ಬಿಡಿ ಅಂತ ಮತ್ತೆ ದುಂಬಾಲು ಬೀಳ್ತಿದ್ದ. ಈ ಮಧ್ಯ ನನ್ನ ಆರೋಗ್ಯ ಹಾಳಾಗಿ ಮನೆಯಲ್ಲಿ ಮಾಡೋರ್ಯಾರೂ ಇಲ್ಲದೇ ಹೋದಾಗ ಮನೆ ಮುಂದಿನ ಸಿಂಗ್ ಸಾಬ್ ತಂಗಿ ಕಮಲೇಶ್ ಬಂದು ತುಂಬಾ ಸಹಾಯ ಮಾಡಿದ್ರು. ಆಕೆನೂ ಮದುವೆ ಮಾಡಿಕೊಂಡಿರಲಿಲ್ಲಾ. ಒಬ್ಬಂಟಿ, ಸಿಂಗ್ ಸಾಬ್ ಹೋದ ಮೇಲೆ ಅವರ ಮಕ್ಕಳೆಲ್ಲಾ ನೋಯ್ಡಾ, ಅಲ್ಲಿ ಇಲ್ಲೀಂತ ಹೊರಟು ಹೋದ್ರಂತೆ. ನಾವಿಬ್ಬರೂ ಒಂಟಿ ಹಕ್ಕಿಗಳು. ಹೀಗೆ ದಿನಾಲೂ ಒಂದಲ್ಲಾ ಒಂದು ಕಾರಣದಿಂದ ಭೇಟಿ ಆಗ್ತಿದ್ವಿ.

ಆರು ತಿಂಗಳ ಬಳಿಕ ನನ್ನ ಮಗ ಬಂದಾಗ ನಮ್ಮಿಬ್ಬರ ಅನ್ಯೋನ್ಯತೆಯನ್ನು ನೋಡಿ ರಾತ್ರಿ ಊಟ ಮಾಡೋವಾಗ, “ಅಪ್ಪಾ, ನೀವು ನನ್ನ ಜೊತೆಗೆ ಬರೋಕಂತೂ ತಯಾರಿಲ್ಲ. ತಪ್ಪು ತಿಳಿಯೋದಿಲ್ಲಾಂದ್ರೆ ಒಂದು ಮಾತು ಹೇಳಲಾ? ನೀವಿಬ್ಬರೂ ಯಾಕೆ ಮದುವೆ ಮಾಡಕೋ ಬಾರ್ದು?” ಅಂದ. ನನಗೆ ತುಂಬಾನೇ ಕೋಪ ಬಂತು. ಉತ್ತರಿಸೋಕೂ ಬಿಡದೆ “ಅಪ್ಪಾ, ನಾನಂತೂ ತುಂಬಾ ದೂರದಲ್ಲಿದ್ದೀನಿ. ಕೆಲಸದಲ್ಲಿದ್ದರೂ ನಿಮ್ಮ ಬಗ್ಗೆ ಚಿಂತೆ ಆಗ್ತಾನೇ ಇರುತ್ತೆ. ಕಮಲೇಶ್ ಆಂಟಿ ನಮಗೆ ಮೊದಲಿಂದನೂ ಪರಿಚಯ. ತುಂಬಾ ಒಳ್ಳೆಯ ಸ್ವಭಾವದವ್ರು. ಅಮ್ಮನ ಸ್ಥಾನ ಅಂತೂ ಯಾರಿಗೂ ತುಂಬೋದಕ್ಕೆ ಸಾಧ್ಯವಿಲ್ಲಪ್ಪಾ. ಆದ್ರೆ ಇವ್ರು ನಿಮಗೊಬ್ಬ ಸಂಗಾತಿ ಅಂತ ಆಗ್ತಾರೆ. ನಿಮ್ಮಿಬ್ಬರ ಅಭಿರುಚಿಗಳೂ ಒಂದೆ. ಅವರಿಗೂ ಒಂದು ಆಧಾರ ಅಂತ ಆಗುತ್ತೆ. ನೋಡಿ ವಿಚಾರ ಮಾಡಿ. ಅವರನ್ನೂ ಒಂದು ಮಾತು ಕೇಳಿ ನೋಡಲಾ?” ಅಂದ.

ನನಗ್ಯಾಕೋ ಇದೆಲ್ಲಾ ಸರಿ ಬೀಳಲಿಲ್ಲಾ. “ಲೋ ಕೇಶವಾ.. ಅಮೇರಿಕಾದಂತೆ ಇಲ್ಲಿ ನಡೆಯೋದಿಲ್ಲಪ್ಪಾ? ನೀನು ಅನ್ನೋದೇನೋ ಸರಿ. ಆದ್ರೆ ನಮ್ಮ ಜನ ಏನಂತಾರೆ? ಛೇ... ಛೇ... ಇದೆಲ್ಲಾ ಬೇಡಪ್ಪಾ. ದೊಡ್ಡ ರಾದ್ಧಾಂತ ಆಗಿಬಿಡುತ್ತೆ.” ಅಂದಾಗ “ನೋಡಿ, ಆ ನಿಮ್ಮ ಜನ ಇಲ್ಲಿ ಬಂದು ನಿಮ್ಮನ್ನ ನೋಡಿಕೊಳ್ತಾರಾ? ಹೋದ್ರೆ ಎರಡೇ ದಿನದಲ್ಲೇ ವಾಪಸ್ ಬಂದು ಬಿಟ್ರೆ ಮತ್ತೆ. ನಿಮಗೂ ಜೀವಿಸುವ ಹಕ್ಕಿದೆ ಅಪ್ಪಾ? ಅವ್ರಿಗೆಲ್ಲ ಹೆದರಿ ಹೀಗೆ ಜೀವಿಸಬೇಕಾ?” ಅಂದ. “ಸರಿಯಪ್ಪಾ. ವಿಚಾರ ಮಾಡ್ತೀನಿ” ಅಂದೆ. ಆದ್ರೆ ನಮ್ಮ ಕೇಶವಾ ಹ್ಯಾಗೇಂತಾ ನಿಂಗೊತ್ತಲ್ಲಾ. ಸಂಜೆ ಕಮಲೇಶ್ ಜೊತೆಗೆ ನಗುತ್ತ ಬಂದೇ ಬಿಟ್ಟ. ಆಕೆಗೂ ಮುಜುಗುರ. ಪಾಪ. ನನ್ನ ಉತ್ತರಕ್ಕೆ ಕಾಯ್ತಾ ಇದ್ದಂತೆ ಅನಿಸ್ತು. “ದೇಕೋ ಕಮಲೇಶ್‌ಜಿ.. ಗಲತ್ ಮತ್ ಸಮಜ್‌ನಾ? ಬಚ್ಚೆ ಕೊ ಮೇರಾ ಫಿಕರ್ ಹೈನಾ..” ಎಂದಾಗ ನನ್ನ ಮಗ “ಅಪ್ಪಾ, ಆಂಟಿಜಿ, ಮೈನೆ ಜೋ ಕಹಾ ಹೈ ಆಪ್ ದೋನೋ ಅಚ್ಛೇ ತರಹಸೆ ಸೋಚಿಯೆ. ಕಲ್ ಹಮ್ ಶಾಮ್ ಕೋ ಮಿಲ್‌ತೆ ಹೈಂ. ಓಕೆ ಆಂಟಿಜಿ” ಅಂದಾಗ ಆಕೆ ಹೂಂ ಅಂತ ತಲೆ ಅಲ್ಲಾಡಿಸಿದ್ರು.

ನಾನು ಕುತೂಹಲ ತಾಳಲಾರದೆ “ಮುಂದೆ?” ಅಂದಾಗ. “ಹಹಹ... ಮುಂದೇನು? ಒಂದು ವಾರದಲ್ಲೇ ಈಕೆ ನನ್ನ ಸಹಧರ್ಮಿಣಿ ಆಗಿ ನನ್ನ ಮನೆಯನ್ನು ತುಂಬಿದ್ಲು. ಕಮಲಾ ನನ್ನ ಬಿಟ್ಟು ಹೋದ್ರೂ ಕಮಲೇಶ್ ಮತ್ತೆ ಮನೆಗೆ ಬಂದ್ಲು. ಆರು ತಿಂಗಳು ಅಮೇರಿಕಾದಲ್ಲಿದ್ವಿ. ಹೋದ ವಾರ ಬಂದ್ವಿ.” ಅಂದಾಗ “ಓ! ಕಂಗ್ರಾಟ್ಸ್? ತುಂಬಾ ಖುಷಿಯಾಯ್ತು ಅಂಕಲ್. ಬಧಾಯಿ ಹೋ ಆಂಟೀಜಿ” ಅನ್ನುತ್ತಾ ಇಬ್ಬರ ಕೈ ಕುಲುಕಿ, ಕೊಟ್ಟ ಪ್ರಸಾದ ಸೇವಿಸಿ ಬಾಯ್ ಎಂದು ಮನೆಗೆ ಬಂದೆ.

ಹೂಂ. ಈಗ ತಿಳೀತು ನೋಡಿ ನನಗೆ. ಈ ಈರುಳ್ಳಿಯ ಹಿಂದಿನ ಕಥೆ.

ವೃದ್ಧ ತಂದೆ ತಾಯಿಯರ ಜವಾಬ್ದಾರಿಯನ್ನು ತೊರೆದು ಹೊರಟು ಹೋಗುವ ಮಕ್ಕಳೂ ಇರ್ತಾರೆ.. ಆದ್ರೆ ಒಬ್ಬಂಟಿಯಾದಾಗ ಅವರ ಬಗ್ಗೆ ಕಳಕಳಿ, ಪ್ರೀತಿ ತೋರಿಸಲು ಮತ್ತೊಂದು ಜೀವ ಜೊತೆಗಿದ್ದರೆ ಒಳಿತೆಂದು, ಅವರನ್ನು ಅರ್ಥ ಮಾಡಿಕೊಳ್ಳುವ ಕೇಶವನಂತಹ ಮಕ್ಕಳೂ ಇದ್ದಾರೆ ಅಲ್ವಾ? ಸಂಬಂಧಪಟ್ಟ ಎಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಿದರೆ ಹೊಂದಾಣಿಕೆ ಸುಲಭವಾಗುತ್ತೆ, ಬರಡು ಜೀವನದ ಬಳ್ಳಿ ಮತ್ತೆ ಸುಂದರವಾಗಿ ಚಿಗುರುತ್ತೆ, ಜೀವಿಸುವ ಇಚ್ಛೆ ಮತ್ತೆ ಹುಟ್ಟುತ್ತೆ. ಅ

*ಸವಿತಾ ಇನಾಮದಾರ್*

## ವಿಶ್ವಬ್ಯಾಂಕ್ ಮುಖ್ಯಾಲಯದಲ್ಲಿ ಯಕ್ಷಗಾನ

ಶ್ರೀಮತಿ ವಿದ್ಯಾ ಕೋಳ್ಯೂರು ನೇತೃತ್ವದ ಯಕ್ಷ ಮಂಜೂಷ ತಂಡವು ಜುಲೈ 19ರಂದು ವಾಷಿಂಗ್‌ಟನ್‌ನಲ್ಲಿರುವ ವಿಶ್ವ ಬ್ಯಾಂಕಿನ ಮುಖ್ಯಾಲಯದಲ್ಲಿ 'ಭಸ್ಮಾಸುರ ಮೋಹಿನಿ' ಪ್ರಸಂಗವನ್ನು ಹಿಂದಿಯಲ್ಲಿ ಪ್ರದರ್ಶಿಸಿ ತೆಂಕುತಿಟ್ಟು ಯಕ್ಷಗಾನವನ್ನು ವಿಶ್ವಮಟ್ಟದಲ್ಲಿ ಪ್ರಚಾರಪಡಿಸಿದೆ.

ವಿಶ್ವಬ್ಯಾಂಕಿನ ಉದ್ಯೋಗಿಯಾದ ಶ್ರೀಮತಿ ಚೇತನಾ ನೀರ್ಚಾಲ್ ಮತ್ತು ಈಗ ಅಮೆರಿಕಾದಲ್ಲಿ ನೆಲೆಸಿರುವ ಆಂಧ್ರಪ್ರದೇಶದವರಾದ ಶ್ರೀ ಚಂದ್ರಶೇಖರ ಕಾಟಿಪ್ಪಲಿಯವರು ಪ್ರದರ್ಶನ ಪೂರ್ವದ ಭದ್ರತಾ ವ್ಯವಸ್ಥೆ, ಪ್ರದರ್ಶನಕ್ಕಾಗಿ ಬೇಕಾದ ಸಿದ್ಧತೆ ಮತ್ತು ವ್ಯವಸ್ಥೆಗಳನ್ನು ನಿರ್ವಹಿಸಿದರು. ಹಿಮ್ಮೇಳದಲ್ಲಿ ಮತ್ತಿಗೆ ರಘುರಾಮ ಹೊಳ್ಳ, ಪದ್ಯಾಣ ಜಯರಾಮ ಹಾಗೂ ಚೈತನ್ಯರು ಸಹಕರಿಸಿದರು. ಮೊದಲ ಬಾರಿಗೆ ಹಿಂದಿಯಲ್ಲಿ ಭಸ್ಮಾಸುರನ ಪಾತ್ರವನ್ನು ಧರ್ಮಸ್ಥಳ ಚಂದ್ರ ಶೇಖರ ಅವರು ವಹಿಸಿದರು. ಈಶ್ವರನಾಗಿ ಲಕ್ಷ್ಮಣ ಕುಮಾರ ಮರಕಡ, ಪಾರ್ವತಿಯಾಗಿ ಪ್ರಶಾಂತ ಶೆಟ್ಟಿ ನೆಲ್ಯಾಡಿ, ವೀರಭದ್ರನಾಗಿ ಮಹೇಶ ಮಣಿಯಾಣಿ, ವಿಷ್ಣುವಾಗಿ ಮೋಹನ ಬೆಳ್ಳಿಪ್ಪಾಡಿಯವರು ಪಾತ್ರ ನಿರ್ವಹಿಸಿದರು. ಮೋಹಿನಿಯಾಗಿ ತಂಡದ ನಿರ್ದೇಶಕಿ ಶ್ರೀಮತಿ ವಿದ್ಯಾ ಕೋಳ್ಯೂರ್ ಅವರು ಅಭಿನಯಿಸಿದರು. ಅ

*ಸರವು ಕೃಷ್ಣ ಭಟ್*




## ಶಿಲ್ಪ ಕಲಾ ಶಿಬಿರದಲ್ಲಿ ಕರ್ನಾಟಕದ ಕಲಾವಿದರು



ರಾಷ್ಟ್ರೀಯ ರಾಜಧಾನಿ ಪ್ರದೇಶದ ಹರ್ಯಾಣದಲ್ಲಿರುವ ಭಾಂಡ್ಸಿಯ ಭಾರತ್ ಯಾತ್ರಾ ಕೇಂದ್ರದಲ್ಲಿ ಭುವನೇಶ್ವರಿ ಕಲಾ ಕೇಂದ್ರವು ಏಪ್ರಿಲ್ ಒಂದರಿಂದ 14ರ ವರೆಗೆ ಶಿಲ್ಪ ಕಲಾ ಶಿಬಿರವನ್ನು ನಡೆಸಿತು. ಕರ್ನಾಟಕದಿಂದ ಡಾ. ಶಿವಾನಂದ ಎಚ್. ಬಂಟನೂರ (ಹಂಪಿ) ಮತ್ತು ಶ್ರೀ ವೆಂಕಟಾಚಲಪತಿ (ಬೆಂಗಳೂರು) ಅವರು ಪಾಲ್ಗೊಂಡು ಒಂದೊಂದು ಕಲಾಕೃತಿಗಳನ್ನು ರಚಿಸಿದರು. ಭುವನೇಶ್ವರಿ ಕಲಾ ಕೇಂದ್ರದ ಅಧ್ಯಕ್ಷೆ ಶ್ರೀಮತಿ ಕಿರಣ್ ಸಿಂಗ್ ಅವರ ನೇತೃತ್ವದಲ್ಲಿ ನಡೆದ ಈ ಶಿಬಿರದಲ್ಲಿ ಭಾರತದ ವಿವಿಧ ಭಾಗಗಳಿಂದ ಎಂಟು ಕಲಾವಿದರು ಭಾಗವಹಿಸಿದ್ದರು.



## ಶ್ರದ್ಧಾಂಜಲಿ

**ಸಿ. ಎಂ.ಮಂಜುನಾಥ ಶೆಟ್ಟಿ**

ದೆಹಲಿ ಕರ್ನಾಟಕ ಸಂಘದ ಸದಸ್ಯ ಶ್ರೀ ಸಿ. ಎಂ.ಮಂಜುನಾಥ ಶೆಟ್ಟಿ ಅವರು ಹಾಸನದಲ್ಲಿ ಇತ್ತೀಚೆಗೆ ನಿಧನರಾದರು. ಅವರು ಭಾರತೀಯ ಕಾಫಿ ಮಂಡಳಿಯಲ್ಲಿ ಸುಮಾರು 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ದೆಹಲಿ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿದ್ದರಲ್ಲದೇ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೂಡ ಕಾರ್ಯವನ್ನು ನಿರ್ವಹಿಸಿದ್ದರು.

**ಶಿವಶಂಕರ**

ಈ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿದ್ದ ಶ್ರೀ ಶಿವಶಂಕರ್ (56) ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಆಗಸ್ಟ್ 21 ರಂದು ನಿಧನರಾದರು. ಅವರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರು ದೆಹಲಿಯಲ್ಲಿ ನೆಲೆಸಿರುವ ಡಾ. ಟಿ.ಎಸ್. ಸತ್ಯನಾಥ್ ಅವರ ತಮ್ಮ. ಮೂಲತ: ತುರುವೆಕೆರೆಯವರು. 1990ರ ದಶಕದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿದ್ದ ಶ್ರೀ ಶಿವಶಂಕರ್ ಅವರು ತಮ್ಮ ಪತ್ನಿ ಶ್ರೀಮತಿ ಗೀತಾ ಹಾಗೂ ಮಗಳು ಸುಮೇಧಾ ಅವರನ್ನು ಮತ್ತು ದೆಹಲಿಯ ಅಪಾರ ಗೆಳೆಯರನ್ನು ಅಗಲಿದ್ದಾರೆ.

# ಕಲಾವಿದನ ಸ್ಮರಣೆಯೊಂದಿಗೆ ಕಲೆಯ ಸುಧಾರಣೆಯ ನೆಲೆಗಳು

ಯಕ್ಷಗಾನ ಕಲಾವಿದ ಕುರಿಯ ವಿಠಲ ಶಾಸ್ತ್ರಿಯವರ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿರುವ ಹಿನ್ನಲೆಯಲ್ಲಿ ಶಾಸ್ತ್ರಿಗಳ ಸಂಸ್ಮರಣ ಗ್ರಂಥ 'ಕುರಿಯ ಕುಂದಣ' ವನ್ನು ಕಾಸರಗೋಡಿನ ಕುರುಡಪದವಿನಲ್ಲಿರುವ ಕುರಿಯ ವಿಠಲ ಶಾಸ್ತ್ರಿ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ ಪ್ರಕಟಿಸಿದೆ. ಬರಹಗಾರ **ಡಾ. ವೈ. ಅವನೀಂದ್ರನಾಥ್ ರಾವ್** ಅವರು ಈ ಕೃತಿಯನ್ನು ಅಭಿಮತಕ್ಕಾಗಿ ವಿಶೇಷವಾಗಿ ವಿಮರ್ಶಿಸಿದ್ದಾರೆ.

ಸಮಾಜದ ಅನಕ್ಷರಸ್ಥ ಸಮುದಾಯದವರಿಂದ ಬೆಳೆದು ಬಂದ ಯಕ್ಷಗಾನ ಜನಪದೀಯ ಕಲೆಯಾಗಿತ್ತು. ಯಕ್ಷಗಾನ ನೋಡುವುದು ಮತ್ತು ಕೇಳುವುದು ಅಪವಿತ್ರ ಮಾತ್ರವಲ್ಲ ನಿಷಿದ್ಧ ಕೂಡಾ ಎಂದು ನಂಬಿದ್ದ ಕಾಲವಿತ್ತು. 'ಆಟದವರು' ಎಂದು ಕಡೆಗಣನೆಗೆ ಈಡಾಗಿದ್ದ ಯಕ್ಷಗಾನ ಕಲಾವಿದರು ಇಂದು ಸರ್ವ ಮನ್ನಣೆಗೆ ಅರ್ಹರಾಗಲು ಆ ಕಲೆಯೊಳಗೆ ವಿದ್ಯಾವಂತರ ಪ್ರವೇಶ ಮತ್ತು ಅವರು ತಂದ ಸುಧಾರಣೆಯೇ ಕಾರಣ. ಅಂತಹ ಸುಧಾರಕರಲ್ಲಿ ದಿ. ಕುರಿಯ ವಿಠಲ ಶಾಸ್ತ್ರಿಗಳು ಪ್ರಮುಖರು.

ಈ ವರ್ಷ ಕುರಿಯ ವಿಠಲ ಶಾಸ್ತ್ರಿಗಳ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿರುವ ಹಿನ್ನಲೆಯಲ್ಲಿ ಶಾಸ್ತ್ರಿಗಳ ಸಂಸ್ಮರಣ ಗ್ರಂಥ 'ಕುರಿಯ ಕುಂದಣ' ಪ್ರಕಟವಾಗಿದೆ. ಈ ಕೃತಿಯಲ್ಲಿ ಯಕ್ಷಗಾನದ ಅಭಿಜಾತ ಕಲಾವಿದನ ಸ್ಮರಣೆಯೊಂದಿಗೆ ಯಕ್ಷಗಾನ ಕಲೆಯಲ್ಲಿ ಆದ ಸುಧಾರಣೆಯ ನೆಲೆಗಳನ್ನು ಗುರುತಿಸಬಹುದು.

ಶಾಸ್ತ್ರಿಗಳು ಜನಿಸಿದ ಕಾಸರಗೋಡಿನ ಪೈವಳಿಕೆ ಗ್ರಾಮದ ಕುರುಡಪದವಿನಲ್ಲಿರುವ ಕುರಿಯ ವಿಠಲ ಶಾಸ್ತ್ರಿ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ ಈ ಕೃತಿಯನ್ನು ಹೊರತಂದಿದೆ. ಹಿರಿಯ ಕಲಾವಿದರು, ಶಾಸ್ತ್ರಿಗಳ ಶಿಷ್ಯವೃಂದ, ಅಭಿಮಾನಿಗಳು ಹಾಗೂ ಕುಟುಂಬದವರು ಬರೆದ 88 ಲೇಖನಗಳು ಮತ್ತು ಅಪೂರ್ವ ಚಿತ್ರಗಳು ಇಲ್ಲಿವೆ. ಕೃತಿಯ ಎರಡನೆಯ ಭಾಗದಲ್ಲಿ ಡಾ. ಎಂ. ಪ್ರಭಾಕರ ಜೋಷಿ, ಡಾ. ರಾಘವ ನಂಬಿಯಾರ್, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಮೊದಲಾದವರು ಬರೆದ ಲೇಖನಗಳು ಯಕ್ಷಗಾನ ಕಲೆಯ ಕುರಿತ ಜ್ಞಾನವನ್ನು ವಿಸ್ತರಿಸಬಲ್ಲುದು.

ಕುರಿಯ ಶಾಸ್ತ್ರಿಗಳು ಯಕ್ಷಗಾನ ಕಲೆಯ ಹಿನ್ನಲೆಯಿಂದ ಬಂದವರು. ಅವರು 'ಯಕ್ಷಗಾನ ನಾಟಕ' ಎಂಬ ಪ್ರಾಕಾರವನ್ನು ಸೃಷ್ಟಿಸಿದ ಕುರಿಯ ವೆಂಕಟ್ರಮಣ ಶಾಸ್ತ್ರಿಯವರ ಪುತ್ರರು. ಕೋಳ್ಯೂರು ಶಂಕರನಾರಾಯಣ ಯಕ್ಷಗಾನ ನಾಟಕ ಮಂಡಳಿಯಲ್ಲಿ ತಂದೆ ಹಿರಣ್ಯ ಕಶಿಪುವಾಗಿ ರಂಗದಲ್ಲಿ ಕಾಣಿಸಿಕೊಂಡರೆ, ಮಗ ಪ್ರಹ್ಲಾದನಾಗಿ ಮಿಂಚಿದರು. 1940 ರಲ್ಲಿ ಈ ನಾಟಕ ಮಂಡಳಿ ನಿಂತು ಹೋದಾಗ ಶಾಸ್ತ್ರಿಗಳು ಅತಿಥಿ ಕಲಾವಿದನಾಗಿ ಯಕ್ಷಗಾನಕ್ಕೆ ಧುಮುಕಿದರು. ಪರಿಣತಿಯನ್ನು ಸಾಧಿಸಲು ಡಾ. ಕೆ. ಶಿವರಾಮ ಕಾರಂತರ ಪುತ್ತೂರಿನ 'ಬಾಲವನ'ದಲ್ಲಿ ಕಿನ್ನರ ನೃತ್ಯದ ತರಬೇತಿಯನ್ನು ಪಡೆದರು.

ಶ್ರೇಣೀಕೃತ ಸಮಾಜದಲ್ಲಿ ಉಚ್ಚವರ್ಗವೆಂದು ಗುರುತಿಸಿಕೊಂಡಿದ್ದ ಬ್ರಾಹ್ಮಣರು ಆ ಕಾಲದಲ್ಲಿ ಯಕ್ಷಗಾನ ಮೇಳಗಳನ್ನು ಸೇರುವುದು


**Saujanya Printing Press**

A HOUSE OF QUALITY PRINTING

C-95, Okhla Industrial Area, Phase-I
New Delhi-110020
Tel: 40520770
Mobile : 9811104398, 9811604398
E-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

ಗೌರವವಲ್ಲ ಎಂಬ ಭಾವನೆಯಿತ್ತು. ಪೂರಕವಾಗಿ ಕೃತಿಯಲ್ಲಿನ ಈ ಕೆಳಗಿನ ಹೇಳಿಕೆಗಳು ಇದನ್ನು ಪುಷ್ಟೀಕರಿಸುತ್ತದೆ.

"ಒಂದು ಆಟ ನೋಡಿದ ಪಾಪ ಪರಿಮಾರ್ಜನೆಗೆ ಏಳು ರಂಗಪೂಜೆ ನೋಡಬೇಕೆಂಬ ಸ್ಥಿತಿಯಿತ್ತು"

(ಲೇ. ಬರೆ ಕೇಶವ ಭಟ್ಟ, ಪುಟ ಸಂಖ್ಯೆ:12)

"ಇದು ಅನಾಗರಿಕ, ಶೀಲಚಾರಿತ್ರ್ಯಹೀನರ ಒಂದು ಕಲೆ ಎಂಬ ಪ್ರತೀತಿಯೂ ಆಗಿತ್ತು"

(ಲೇ. ತದ್ದಲಸೆ ವಿಘ್ನೇಶ್ವರ ಶರ್ಮ, ಪುಟ ಸಂಖ್ಯೆ: 46)


"ದೀವಟಿಗೆಯ ಬೆಳಕಿನಲ್ಲಿ ಭಯಂಕರವಾದ ಮುಖವರ್ಣಿಕೆಯಿಂದ ಯಾವುದೋ ಭೀತಿಯ ವಾತಾವರಣವನ್ನು ಉಂಟುಮಾಡುತ್ತಿತ್ತು. ಅಂತಹ ಬಯಲಾಟಗಳಿಗೆ ವಿದ್ಯಾವಂತರ ದೃಷ್ಟಿಯೂ ಬೀಳುತ್ತಿರಲಿಲ್ಲ"

(ಲೇ, ಹೊಸಹಿತ್ಲು ಮಹಾಲಿಂಗ ಭಟ್ಟ, ಪುಟ ಸಂಖ್ಯೆ : 70)

ವಸ್ತುಸ್ಥಿತಿ ಹೀಗಿದ್ದ ಕಾಲದಲ್ಲಿ ಆ ಕಲೆಯ ಮೇಲಿನ ವಿಶೇಷ ಆಕರ್ಷಣೆ ಮತ್ತು ಪ್ರೀತಿ ಶಾಸ್ತ್ರಿಗಳನ್ನು ಯಕ್ಷಗಾನಕ್ಕೆ ಎಳೆದು ತಂದಿತ್ತು. ಸೀಮಿತವಾದ ಮನೆತನದ ಗೌರವಕ್ಕಿಂತ ವಿಶಾಲವಾದ ಕಲೆಯ ಗೌರವವೇ ದೊಡ್ಡದು ಎಂದು ಶಾಸ್ತ್ರಿಗಳು ಭಾವಿಸಿದ್ದರು ಎಂಬುದಾಗಿ ಅವರ ಶಿಷ್ಯೋತ್ತಮರಲ್ಲಿ ಒಬ್ಬರಾದ ಮೇರು ಕಲಾವಿದ ಡಾ. ಕೋಳ್ಯೂರು ರಾಮಚಂದ್ರ ರಾವ್ ಅವರು ಬರೆಯುತ್ತಾರೆ. ಹವ್ಯಕ ಬ್ರಾಹ್ಮಣರ ಪ್ರಸಿದ್ಧ ಚಕ್ರಕೋಡಿ ಮನೆತನದಿಂದ ಬಂದ ವಿಠಲ ಶಾಸ್ತ್ರಿಗಳ ನಿಲುವು ಕ್ರಾಂತಿಕಾರಿಯಾಗಿತ್ತು ಎನ್ನಬಹುದು.

ವಿಠಲ ಶಾಸ್ತ್ರಿಗಳು ಮೊದಲ ಬಾರಿಗೆ ಯಕ್ಷಗಾನ ಮೇಳವೊಂದರ ಕಲಾವಿದರಾಗಿ ಕಟೀಲು ಮೇಳವನ್ನು ಸೇರಿದರು. ಆಗ ಕಲ್ಲಾಡಿ ಕೊರಗ ಶೆಟ್ಟರು ಮೇಳದ ಸಂಚಾಲಕರಾಗಿದ್ದರು. ಆ ಮೇಳದಲ್ಲಿದ್ದ ಮೋನಪ್ಪ ರೈ ಹಾಗೂ ಅವರ ಪುತ್ರ ಅಳಿಕೆ ರಾಮಯ್ಯ ರೈ ಅವರು ಆಗಲೇ ಸುಪ್ರಸಿದ್ಧ ಕಲಾವಿದರಾಗಿದ್ದರು ಎಂಬುದು ಗಮನಾರ್ಹ. ಶಾಸ್ತ್ರಿಗಳು ಅಲ್ಲಿ ಖ್ಯಾತ ಭಾಗವತ ಬಲಿಪ ನಾರಾಯಣರಿಗೆ ಅಚ್ಚು ಮೆಚ್ಚಿನ ಶಿಷ್ಯರಾದರು. ನಂತರ ಕಾವು ಕಣ್ಣನ್ ಅವರಿಂದ ಶಾಸ್ತ್ರೀಯವಾಗಿ ಯಕ್ಷಗಾನ ನಾಟ್ಯ ಮತ್ತು ಪರಮಶಿವನ್ ಅವರಿಂದ ಭರತನಾಟ್ಯವನ್ನು ಕಲಿತರು. ಇದರ ಪರಿಣಾಮ ಅದುವರೆಗೆ ಮಾತುಗಾರಿಕೆಗೆ ಮಹತ್ವ ಪಡೆದಿದ್ದ ಯಕ್ಷಗಾನದಲ್ಲಿ ಅಭಿನಯ ಮತ್ತು ನಾಟ್ಯದ ಮೂಲಕ ಭಾವಾಭಿವ್ಯಕ್ತಿಗೆ ಹೆಚ್ಚಿನ ಒತ್ತು ನೀಡುವಂತೆ ಪ್ರೇರಣೆ ನೀಡಿತ್ತು. ಇದು ಯಕ್ಷಗಾನ ಕಲೆಯಲ್ಲಿ ಶಾಸ್ತ್ರಿಗಳು ತಂದ ಸುಧಾರಣೆಗಳಲ್ಲಿ ಒಂದು.

ಮಠ ಮಂದಿರಗಳ ಅಲಕ್ಷ್ಯಕ್ಕೆ ಒಳಗಾಗಿದ್ದ ಯಕ್ಷಗಾನ ಕಲೆಯನ್ನು ಪ್ರೋತ್ಸಾಹಿಸಿದವರು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು. ಶಾಸ್ತ್ರಿಗಳು ಆಗ 33 ರ ಯುವಕ. ಪೂಜ್ಯ




**ಯಕ್ಷಗಾನ ಮೇಳಗಳ ಸಂಚಾಲಕರಾಗಿ ಮುಖ್ಯವಾಗಿ ತೆಂಕುತಿಟ್ಟು ಯಕ್ಷಗಾನವನ್ನು ಮೂಲ್ಕಿಯ ಶಾಂಭವಿ ನದಿಯ ಆಚೆಗೆ ಅಂದರೆ ಉತ್ತರ ಕನ್ನಡ ಮತ್ತು ರಾಜ್ಯದ ಇತರ ಭಾಗದಲ್ಲಿ ಜನಪ್ರಿಯಗೊಳಿಸಿದವರು ವಿಠಲ ಶಾಸ್ತ್ರಿಗಳು. ಮಾತ್ರವಲ್ಲ 1958 ರಲ್ಲಿ ಅವರ ತಂಡ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಪ್ರದರ್ಶನ ನೀಡಿ ದಾಖಲೆ ಮಾಡಿತು. ಆಕಾಶವಾಣಿಯಲ್ಲೂ ಕಾರ್ಯಕ್ರಮ ನೀಡಿತು.**

ಮಂಜಯ್ಯ ಹೆಗ್ಗಡೆಯವರಿಂದ ಧರ್ಮಸ್ಥಳ ಮೇಳವನ್ನು ನಡೆಸಲು ಕರೆ ಬಂದಿತ್ತು. ಮುಂದೆ ಶಾಸ್ತ್ರಿಗಳು ಎರಡು ದಶಕಗಳ ಕಾಲ ಆ ಮೇಳದ ವ್ಯವಸ್ಥಾಪಕರಾಗಿ, ಪ್ರಧಾನ ಕಲಾವಿದರಾಗಿ ಯಕ್ಷಗಾನದಲ್ಲಿ ಅನೇಕ ಬದಲಾವಣೆಗಳಿಗೆ ಕಾರಣರಾದರು.

ಮೂಡಬಿದಿರೆಯ ದೇಲಂತಬೆಟ್ಟು ಎಂಬಲ್ಲಿ ಅವರು ಆರಂಭಿಸಿದ 'ಡೇರೆಯ ಆಟ' ಎಲ್ಲ ಮೇಳಗಳಿಗೂ ನಾಂದಿ ಹಾಡಿತು. ಡೇರೆಯ ಆಟಗಳು ಕಲಾವಿದರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿತು. ಆ ದಿನಗಳಲ್ಲಿ ಅವರ 'ಬ್ರಹ್ಮಕಪಾಲ'ದ ಮತ್ತು 'ದಕ್ಷಾಧ್ವರ'ದ ಈಶ್ವರನ ಪಾತ್ರ ಸ್ಮರಣೀಯವಾಗಿತ್ತು ಎಂದು ಬಹುತೇಕ ಲೇಖಕರು, ಕೃತಿಕಾರರು ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಯಕ್ಷಗಾನ ಮೇಳಗಳ ಸಂಚಾಲಕರಾಗಿ ಮುಖ್ಯವಾಗಿ ತೆಂಕುತಿಟ್ಟು ಯಕ್ಷಗಾನವನ್ನು ಮೂಲ್ಕಿಯ ಶಾಂಭವಿ ನದಿಯ ಆಚೆಗೆ ಅಂದರೆ ಉತ್ತರ ಕನ್ನಡ ಮತ್ತು ರಾಜ್ಯದ ಇತರ ಭಾಗದಲ್ಲಿ ಜನಪ್ರಿಯಗೊಳಿಸಿದವರು ವಿಠಲ ಶಾಸ್ತ್ರಿಗಳು. ಮಾತ್ರವಲ್ಲ 1958 ರಲ್ಲಿ ಅವರ ತಂಡ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಪ್ರದರ್ಶನ ನೀಡಿ ದಾಖಲೆ ಮಾಡಿತು. ಆಕಾಶವಾಣಿಯಲ್ಲೂ ಕಾರ್ಯಕ್ರಮ ನೀಡಿತು.

ಬೆಂಗಳೂರಿನಲ್ಲಿ ರಷ್ಯಾದ ನಾಯಕರಾದ ಕ್ರುಶ್ಚೇವ್ ಮತ್ತು ಬುಲ್ಗಾನಿನ್ ಗೌರವಾರ್ಥ ಜರಗಿದ ಯಕ್ಷಗಾನ ಪ್ರಶಂಶೆ ಪಡೆಯಿತು. 'ದಕ್ಷಾಧ್ವರ' ಪ್ರಸಂಗದ ಈಶ್ವರನಾಗಿ ಶಾಸ್ತ್ರಿಗಳು ಜಟೆಯನ್ನು ಭೂಮಿಗೆ ಬಡಿದು ವೀರಭದ್ರನನ್ನು ಸೃಷ್ಟಿಸಿದ ಸನ್ನಿವೇಶದ ಭೀಕರತೆಯು ರಷ್ಯಾದ ಪ್ರಧಾನಿಗಳ ಮಡದಿ ಮೂರ್ಛೆ ಹೋಗುವಂತೆ ಮಾಡಿದ್ದು ಸುದ್ದಿಯಾಗಿತ್ತು ಅಂತ ನೆನಪಿಸಿದ್ದಾರೆ, ಹಿರಿಯರಾದ ಅಮೃತ ಸೋಮೇಶ್ವರ.

ಕಲಾವಿದರಾಗಿ ಕಲೆಯ ಅಭಿವ್ಯಕ್ತಿಯಲ್ಲಿ ಸೃಜನಶೀಲತೆಯನ್ನು, ಮೇಳಗಳ ವ್ಯವಸ್ಥಾಪಕರಾಗಿ ಕಲಾವಿದರಿಗೆ ಆರ್ಥಿಕ ಸುಭದ್ರತೆಯನ್ನು ಒದಗಿಸಿದ ಶಾಸ್ತ್ರಿಗಳು ಈ ಕಲೆಯಲ್ಲಿ ಸುಧಾರಣೆ ತಂದ ಆದ್ಯ ಪ್ರವರ್ತಕರೆನಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಯಕ್ಷಗುರು ಬನ್ನಂಜೆ ಸಂಜೀವ ಸುವರ್ಣರು ಸ್ಮರಿಸುವಂತೆ, ಶಾಸ್ತ್ರಿಗಳ ರಂಗ ಪ್ರವೇಶ ಕಲೆಯೊಳಗಿನ ಶೂದ್ರತ್ವದ ನಿವಾರಣೆಗೆ ಸಾಕ್ಷಿಯಾಯಿತು. ಕೃತಿಗೆ ಬೆನ್ನುಡಿ ಬರೆದ ಡಾ. ತಾಳ್ತಜೆ ವಸಂತ ಕುಮಾರ ಅವರು ಶಾಸ್ತ್ರಿಗಳ ಬದುಕು ರಂಗಶಾಲೆ ಎಂದಿರುವುದು ಕೃತಿಯನ್ನು ಓದುವಾಗ ಮನದಟ್ಟಾಗುತ್ತದೆ.

ಶಾಸ್ತ್ರಿಗಳು ಬದುಕಿದ್ದು 60 ವರ್ಷ. ಅವರ ಹೆಸರಿನಲ್ಲಿ ಅವರ ಊರಿನ ಜನರು ಸೇರಿ ಕುರಿಯ ವಿಠಲ ಶಾಸ್ತ್ರಿ ಸ್ಮಾರಕ ಪ್ರೌಢಶಾಲೆಯ ನಿರ್ಮಾಣಕ್ಕೆ ಕಾರಣರಾದುದು, ಅಲ್ಲಿನ ಜನರೊಂದಿಗೆ ಮೇರು ಕಲಾವಿದ ಹೊಂದಿದ್ದ ಭಾವನಾತ್ಮಕ ಸಂಬಂಧಕ್ಕೆ ಕನ್ನಡಿ ಹಿಡಿದಿದೆ. ತನ್ನ ಪ್ರಸಿದ್ಧ ಶಿವ ತಾಂಡವ ನೃತ್ಯ ಮಾಡುತ್ತಿದ್ದಾಗಲೇ ಕುಸಿದು ರಂಗದಿಂದ ಶಾಸ್ತ್ರಿಗಳು ನಿರ್ಗಮಿಸಿದ್ದರು. ಒಬ್ಬ ಪರಿಪೂರ್ಣ ಕಲಾವಿದನಾಗಲು ಸರ್ವಾಂಗಗಳೂ ಪಾತ್ರಾಭಿವ್ಯಕ್ತಿಯಲ್ಲಿ ಪಾಲ್ಗೊಳ್ಳಬೇಕು ಎನ್ನುವ ಶಾಸ್ತ್ರಿಗಳ ಮಾತು ಕಲಾವಿದರಿಗೆ ಸಾರ್ವಕಾಲಿಕ ಸಂದೇಶವಾಗಬಹುದು. ಅ

***ಡಾ. ವೈ. ಅವನೀಂದ್ರನಾಥ್ ರಾವ್***

# ದೆಹಲಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ

ಶ್ರೀ ರಾಘವೇಂದ್ರ ಸ್ವಾಮಿಯವರ 342ನೇ ಆರಾಧನಾ ಮಹೋತ್ಸವವು ನವದೆಹಲಿಯ ಆರ್.ಕೆ.ಪುರಂನ ರಾಘವೇಂದ್ರ ಸ್ವಾಮಿ ಮಠದಲ್ಲಿ ನಾಲ್ಕು ದಿನಗಳ ಕಾಲ ವಿವಿಧ ಆರಾಧನೆ, ಪೂಜೆ ಮತ್ತು ರಥೋತ್ಸವದೊಂದಿಗೆ ಜರುಗಿತು. ಈ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು.

ಮಹೋತ್ಸವದ ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಬೆಂಗಳೂರಿನ ಸೂರ್ಯ ಕಲಾವಿದರು ಮೋಹಿನಿ ಭಸ್ಮಾಸುರ ನೃತ್ಯರೂಪಕವನ್ನು ಪ್ರಸ್ತುತ ಪಡಿಸಿದರು. ಭಜನಾ ಮಂಡಳಿಯ ಸದಸ್ಯರು ದಾಸರ ಪದಗಳು, ರಾಯರ ಭಕ್ತಿಗೀತೆಗಳನ್ನು ಹಾಡಿದರು.

ಸಂಸದರಾದ ಶ್ರೀ ಅನಂತ ಕುಮಾರ್ ಮತ್ತು ಶ್ರೀ ಪ್ರಹ್ಲಾದ್ ಜೋಷಿ, ಡಾ. ಡಿ.ಎಂ. ನಂಜುಂಡಪ್ಪ ವರದಿ ಅನುಷ್ಠಾನ ಉನ್ನತಾಧಿಕಾರಿ ಸಮಿತಿಯ ಶ್ರೀ ತ್ರಿವಿಕ್ರಮ ಜೋಷಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಮಾರಂಭದ ಅತಿಥಿಗಳಾಗಿದ್ದರು.

ಸಂಸದರಾದ ಶ್ರೀ ಅನಂತ ಕುಮಾರ್ ಅವರು ತಮ್ಮ ಭಾಷಣದಲ್ಲಿ ಅವರು ವಿಶ್ವಸಂಸ್ಥೆಗೆ ಹೋದ ಸಂದರ್ಭದಲ್ಲಿ ಕನ್ನಡದಲ್ಲೇ ಭಾಷಣ ಮಾಡಿ ಕನ್ನಡತನವನ್ನು ಎತ್ತಿ ಹಿಡಿದುದರ ಬಗ್ಗೆ ತಿಳಿಸಿದರು. ಅವರು ಚುನಾವಣೆ ಗೆದ್ದು ಬಂದಾಗಲೆಲ್ಲಾ ಸದನದಲ್ಲಿ ಕನ್ನಡದಲ್ಲೇ ಪ್ರಮಾಣ ವಚನವನ್ನು ಸ್ವೀಕರಿಸಿದುದರ ಬಗ್ಗೆ ತಿಳಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಮ್ಮ ಭಾಷಣದಲ್ಲಿ ಶ್ರೀ ಅನಂತ ಕುಮಾರ್ ಅವರು ಸಂಘಕ್ಕೆ ಮಾಡಿದ ಸಹಾಯವನ್ನು ನೆನೆಯುತ್ತ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಕರ್ನಾಟಕದಲ್ಲಿ ವಿವಿಧ ಭಾಷೆಗಳನ್ನು ಮಾತನಾಡುವ ಜನರು ಎಲ್ಲರೂ ಒಗ್ಗಟ್ಟಾಗಿ ಸುಧೃಢ ಕರ್ನಾಟಕವನ್ನು ಬೆಳೆಸಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸತತವಾಗಿ 15 ವರ್ಷಗಳಿಂದ ಪಾದಯಾತ್ರೆಯಲ್ಲಿ ಮಂತ್ರಾಲಯಕ್ಕೆ ತೆರಳಿ ರಾಯರ ದರ್ಶನವನ್ನು ಮಾಡುತ್ತಾ ಬಂದಿರುವ ಮತ್ತು ದೆಹಲಿಯ ರಾಯರ ಮಠದಲ್ಲಿಯೂ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಶ್ರೀ ಸುಧೀರ್ ಫಡ್ನೀಸ್ ಅವರನ್ನು ಮಠದ ವತಿಯಿಂದ ಪ್ರಸಾದ ನೀಡಿ ಶಾಲು ಹೊದಿಸಿ ಗೌರವಿಸಲಾಯಿತು.

ಅತಿಥಿಗಳನ್ನು ಶ್ರೀನಿವಾಸ್ ರಾವ್ ಕಸಬೆ ಅವರು ಸ್ವಾಗತಿಸಿ ರಾಘವೇಂದ್ರ ಸ್ವಾಮಿಗಳ ಆಶೀರ್ವಚನದ ಶಾಲು ಹೊದಿಸಿ ಪ್ರಸಾದ ನೀಡಿ ಗೌರವಿಸಿದರು. ಶ್ರೀ ಶ್ರೀನಾಥ್ ಎನ್. ಆರ್. ಅವರು ಕಾರ್ಯಕ್ರಮವನ್ನು ನಿರ್ವಹಿಸಿ ವಂದಿಸಿದರು.

***ಎಸ್.ಸಿ. ಹೇಮಲತಾ***





## ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನಿಂದ ರಂಗೋಲಿ ಸ್ಪರ್ಧೆ

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ಆಗಸ್ಟ್ 21 ರಂದು ದೆಹಲಿಯಲ್ಲಿ ನಡೆಸಿದ ರಂಗೋಲಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಶ್ರೀಮತಿ ರಂಗಮಣಿ ರಾವ್ ಹಾಗೂ ಶ್ರೀಮತಿ ಅಶಾ ಶ್ಯಾಮ್ ಸುಂದರ್ ಅವರೂ, ದ್ವಿತೀಯ ಬಹುಮಾನವನ್ನು ಶ್ರೀಮತಿ ಹೇಮಲತಾ ಗುಡ್ಡೆ ಗೌಡ ಅವರೂ ಪಡೆದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಖ್ಯಾತ ಕಲಾವಿದೆ ಶ್ರೀಮತಿ ಜ್ಯೋತಿ ಎಸ್.ಪೊದ್ದಾರ್ ಅವರು ವಿಜೇತರಿಗೆ ಬಹುಮಾನಗಳನ್ನು ನೀಡಿ ಅಭಿನಂದಿಸಿದರು.

***ಡೀನಾ ಜೋಯ್ಸ್ ಜತ್ತನ್ನ***



## ಗುರ್‌ಗಾಂವ್ ಕನ್ನಡಿಗರಿಂದ ಸತ್ಯನಾರಾಯಣ ಪೂಜೆ

ಗುರ್‌ಗಾಂವ್ ಕನ್ನಡ ಸಂಘವು ಭಾರತದ ಸ್ವಾತಂತ್ರ್ಯ ದಿನವಾದ ಆಗಸ್ಟ್ 15ರಂದು ವೇದ ಪಂಡಿತ ಶ್ರೀ ರಾಘವೇಂದ್ರ ಭಟ್ಟರ ಸಾನ್ನಿಧ್ಯದಲ್ಲಿ ಶ್ರೀಮತಿ ಮತ್ತು ಶ್ರೀ ಗಣೇಶ್ ಉಪಾಧ್ಯಾಯ ಅವರ ಪೂಜಾ ಕೈಂಕರ್ಯದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಿತು.

ಗುರ್‌ಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಆನಂದ್ ಶಂಕರ್ ಮತ್ತು ಕಾರ್ಯದರ್ಶಿ ಶ್ರೀ ಈಶ್ವರಲಿಂಗ ಅರೇರಾ, ಖಜಾಂಚಿ ಶ್ರೀ ವೆಂಕಟೇಶ ಅವರ ಜತೆಗೆ ಸಂಘದ ಸದಸ್ಯರಾದ ಶ್ರೀ ರಾಜಣ್ಣ, ಶ್ರೀ ವಸಂತ ರಾವ್, ಶ್ರೀ ಪ್ರಸನ್ನ ಬಂಟ್ವಾಳ್, ಶ್ರೀ ನಾಗೇಶ್, ಶ್ರೀ ಡಿ.ವಿ.ಎಸ್.ಮೂರ್ತಿ, ಶ್ರೀ ಸಾಯಿಪ್ರಸಾದ್, ಶ್ರೀ ನಾರಾಯಣ ಶೆಟ್ಟಿ, ಶ್ರೀ ತಿಮ್ಮಪ್ಪ, ಶ್ರೀ ಮರಿಬಸಪ್ಪ, ಶ್ರೀ ಲಕ್ಷ್ಮಣ್, ಶ್ರೀ ಸಿದ್ದಲಿಂಗ, ಶ್ರೀ ಅಂತೋನಿ ಮೊದಲಾದವರು ಸೇರಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಗುರ್‌ಗಾಂವ್‌ನ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಸುಮಾರು 300 ಕನ್ನಡಿಗರು ಆಗಮಿಸಿದ್ದರು. ಪೂಜೆಯ ನಂತರ ಶ್ರೀ ಸಂತೋಷ್, ಶ್ರೀ ನಾಗರಾಜ್ ಮತ್ತು ಶ್ರೀ ಬೋಪಣ್ಣ ಅವರ ತಂಡವು 13 ವಿವಿಧ ಬಗೆಯ ಕರ್ನಾಟಕ ಶೈಲಿಯ ತಿಂಡಿಗಳ ಭೋಜನವನ್ನು ಉಣ ಬಡಿಸಿದರು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಹೇಮಲತಾ ಮತ್ತು ಶ್ರೀ ಟಿ.ಎಂ. ಮೈಲಾರಪ್ಪ, ಸಂಘದ ಮಾಜೀ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ, ಮಾಜೀ ಜಂಟಿ ಕಾರ್ಯದರ್ಶಿ ಶ್ರೀ ಎನ್.ಆರ್. ಶ್ರೀನಾಥ್ ಮೊದಲಾದವರು ಪಾಲ್ಗೊಂಡಿದ್ದರು. ಅ

***ಸತೀಶ್ ಬಸವಾರಾಧ್ಯ***

## ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದಿಂದ ಸತ್ಯನಾರಾಯಣ ಪೂಜೆ

ದೆಹಲಿಯ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘವು ಇದೇ ಆಗಸ್ಟ್ 18ರಂದು ಆರ್. ಕೆ.ಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಗುರು ಪೂಜೆಯನ್ನು ಏರ್ಪಡಿಸಿತ್ತು.

ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಶ್ರೀ ನಾರಾಯಣ ಗುರು ಅವರ ಕುರಿತು ಮಾತಾಡಿದರು. ದೆಹಲಿಯ ನೂರಾರು ಬಿಲ್ಲವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಶ್ರೀ ಜಯರಾಮ್ ಬನಾನ್ ಮತ್ತು ಶ್ರೀ ಪ್ರಭಾಕರ ಬಂಗೇರಾ ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರನ್ನು ಅಭಿನಂದಿಸಿದರು. ಅ

***ಪ್ರದೀಪ್ ಪೂಜಾರಿ***

## ಸುಮುಖ ಸೋಶಿಯಲ್ ವೆಲ್‌ಫೇರ್ ಸೊಸೈಟಿ ಉದ್ಘಾಟನೆ

ಸುಮುಖ ಸೋಶಿಯಲ್ ವೆಲ್‌ಫೇರ್ ಸೊಸೈಟಿಯ ಉದ್ಘಾಟನೆಯನ್ನು ಶ್ರೀಮತಿ ಪ್ರೇಮಾ ಕಾರಿಯಪ್ಪನವರು ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ 15ರಂದು ದೀಪ ಬೆಳಗಿಸಿ ನೆರವೇರಿಸಿದರು.

ಈ ಸಂದರ್ಭದಲ್ಲಿ 3ರಿಂದ 5 ವರ್ಷದ ಮಕ್ಕಳಿಗೆ ಸ್ವಾತಂತ್ರ್ಯ ದಿನಾಚರಣೆ, 6ರಿಂದ 10 ವರ್ಷದ ಮಕ್ಕಳಿಗೆ ಪರಿಸರ ಸಂರಕ್ಷಣೆ ಹಾಗೂ 11ರಿಂದ 15 ವರ್ಷದ ಮಕ್ಕಳಿಗೆ ಹೆಣ್ಣು ಮಕ್ಕಳನ್ನು ರಕ್ಷಿಸಿ ವಿಷಯಗಳ ಮೇಲೆ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸುಮಾರು 60ಕ್ಕೂ ಹೆಚ್ಚು ಮಕ್ಕಳು ಉತ್ಸಾಹದಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ದೆಹಲಿ ಕನ್ನಡ ಶಾಲೆಯ ಚಿತ್ರಕಲೆಯ ಅಧ್ಯಾಪಕಿಯಾಗಿರುವ ಶ್ರೀಮತಿ ಜ್ಯೋತಿ ಪೋದ್ದಾರ್ ಅವರು ವಿಜೇತರನ್ನು ಘೋಷಿಸಿದರು. ವಿಜೇತ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಅ

***ಪೂರ್ಣಿಮಾ ಗೌಡ***






# ಸಾರ್ವಜನಿಕ ಗಣೇಶೋತ್ಸವಗಳ


## ಆಶಯಗಳು ಬದಲಾಗುತ್ತಿವೆಯೇ?

ಭಾರತವು ತನ್ನ ಅರವತ್ತನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವೂ ಎಲ್ಲಿ ನೋಡಿದರಲ್ಲಿ ಸಂಭ್ರಮದ ಸ್ವಾತಂತ್ರ್ಯ ಆಚರಣಾ ಸಮಾರಂಭಗಳು, ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಗಳು ಮತ್ತು ಸನ್ಮಾನಗಳು ನಡೆಯುತ್ತಿವೆ. ಸ್ವಾತಂತ್ರ್ಯ ಆಚರಣೆಯ ಮುಗಿಯುತ್ತಿದ್ದಂತೆ ಗಣಪತಿ ಹಬ್ಬ ಬರುವುದು.

ಇತಿಹಾಸದ ಪುಟಗಳನ್ನು ನಾವು ನೋಡಿದಾಗ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಾರ್ವಜನಿಕ ಗಣೇಶೋತ್ಸವಗಳು ವಹಿಸಿದ ಮಹತ್ವದ ಪಾತ್ರದ ಅರಿವು ಉಂಟಾಗುತ್ತದೆ. ಕ್ರಿ.ಶ. 1600ರಲ್ಲಿ ಭಾರತದಲ್ಲಿ ಸ್ಥಾಪಿತವಾದ ಈಸ್ಟ್ ಇಂಡಿಯಾ ಕಂಪೆನಿಯು ಭಾರತದ ಆರ್ಥಿಕ ಸ್ವಾತಂತ್ರ್ಯವನ್ನು ಕಬಳಿಸುತ್ತಾ ರಾಜಕೀಯ ಪ್ರಭುತ್ವವನ್ನು ಕ್ರಿ.ಶ. 1890ರ ಸುಮಾರಿಗೆ ಸ್ಥಾಪಿಸಿತು. ಅಖಂಡ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯು 1885ರ ನಂತರ ಆರಂಭವಾಯಿತು. ಬೇರೆ ಬೇರೆಯಾಗಿದ್ದ ರಾಜಮನೆತನಗಳು, ಜನ ಸಮುದಾಯಗಳು ಮತ್ತು ಧರ್ಮಗಳು ಸ್ವಾತಂತ್ರ್ಯದ ಹೋರಾಟದಲ್ಲಿ ಒಂದಾದವು.

ಜನರ ಒಗ್ಗಟ್ಟನ್ನು ಮುರಿದು ರಾಜ್ಯಭಾರ ಮಾಡುವುದರಲ್ಲಿ ನಿಸ್ಸೀಮರಾಗಿದ್ದ ಬ್ರಿಟಿಷರು ಹಿಂದೂ-ಮುಸ್ಲಿಮರಲ್ಲಿ ಒಡಕನ್ನು ತರಲು ಪ್ರಯತ್ನಿಸಿದರು.

ಇದನ್ನು ಮನಗಂಡ ತೀವ್ರಗಾಮಿಗಳ ಮುಖಂಡರಾದ ಲೋಕಮಾನ್ಯ ಬಾಲಗಂಗಾಧರ ತಿಲಕರು ತಮ್ಮ ಭಾಷಣ ಮತ್ತು ಬರವಣಿಗೆಗಳಿಂದ ಜನರನ್ನು ಬ್ರಿಟಿಷರ ವಿರುದ್ಧ ರೊಚ್ಚಿಗೆಬ್ಬಿಸಿದರು.



ಜನಸಾಮಾನ್ಯರಲ್ಲಿ ರಾಷ್ಟ್ರೀಯ ಐಕ್ಯತಾ ಭಾವನೆಯನ್ನು ಬೆಳೆಸಲು ಲೋಕಮಾನ್ಯ ತಿಲಕರು ಸಾಂಪ್ರದಾಯಿಕವಾಗಿ ಮನೆ, ಕುಟುಂಬದೊಳಗೆ ಆಚರಿಸುತ್ತಿದ್ದ ಹಬ್ಬವನ್ನು ಸಾರ್ವಜನಿಕ ಗಣೇಶೋತ್ಸವವನ್ನಾಗಿ ಮಾಡಿದರು. ಸ್ವಾತಂತ್ರ್ಯೋತ್ತರ ಕಾಲದಲ್ಲೂ ಈ ಸಾರ್ವಜನಿಕ ಗಣೇಶೋತ್ಸವಗಳ ಆಚರಣೆ ಮುಂದುವರಿಯುತ್ತಾ ಬಂದಿದೆ.

ಲೋಕಮಾನ್ಯ ತಿಲಕರು ಅಂದು ಜನರಲ್ಲಿ ರಾಷ್ಟ್ರೀಯ ಭಾವನೆ ಮತ್ತು ಐಕ್ಯತೆಯನ್ನು ಬೆಳೆಸಲು ಆರಂಭಿಸಿದ ಸಾರ್ವಜನಿಕ ಗಣೇಶೋತ್ಸವಗಳು ಇಂದು ಧಾರ್ಮಿಕ ಗಲಭೆ, ಜನಸಾಮಾನ್ಯರಲ್ಲಿ ಅಶಾಂತಿ ಮತ್ತು ಹಿಂಸೆಯನ್ನು ಪ್ರಚೋದಿಸುವ ಸಂದರ್ಭವಾಗುವುದು ವಿಪರ್ಯಾಸ. ಸ್ವಾತಂತ್ರ್ಯ ದೊರಕುವ ವರೆಗೆ ಶ್ರದ್ಧೆ ಮತ್ತು ಭಕ್ತಿಯಿಂದ ಸಾರ್ವಜನಿಕವಾಗಿ ಆಚರಿಸಲಾಗುತ್ತಿದ್ದ ಗಣೇಶೋತ್ಸವವು ಅದರ ಮೂಲ ಸ್ವರೂಪವನ್ನು ಕಳೆದು ಧಾರ್ಮಿಕ ಪ್ರಚೋದನೆಯ ಜತೆಗೆ ವ್ಯಾಪಾರೀಕರಣಗೊಂಡಿರುವುದು ಕೂಡ ಬೇಸರದ ಸಂಗತಿಯಾಗುತ್ತದೆ. ವಿವಿಧ ಗುಂಪುಗಳು ಸ್ಪರ್ಧಾತ್ಮಕ ಭಾವನೆಗಳಿಂದ ಮೂರ್ತಿಗಳನ್ನು ರಚಿಸಿ ಸ್ಥಾಪಿಸುವುದರೊಂದಿಗೆ ಆರಂಭವಾಗುವ ಘರ್ಷಣೆಗಳು ಲೋಕಮಾನ್ಯ ತಿಲಕರ ಸಾರ್ವಜನಿಕ ಗಣೇಶೋತ್ಸವದ ಆಶಯವನ್ನು ಕಡೆಗಣಿಸಿವೆ.

ಭಕ್ತಿ, ಪ್ರೀತಿಯನ್ನು ಬೆಳೆಸುವ ಹಬ್ಬ ಈಗ ಭಯ, ಆತಂಕಗಳನ್ನು ಹೆಚ್ಚಿಸುತ್ತಿವೆ. ದೇಶದಲ್ಲಿ ಪ್ರತಿದಿನ ನಡೆಯುತ್ತಿರುವ ಕೋಮು ಗಲಭೆಗಳು, ಕೆಳವರ್ಗ, ಮೇಲುವರ್ಗಗಳ ನಡುವಿನ ಕಚ್ಚಾಟಗಳು ಸಾರ್ವಜನಿಕ ಗಣೇಶೋತ್ಸವದ ಸಂದರ್ಭದಲ್ಲಿ ಉಲ್ಬಣಿಸುತ್ತವೆ. ಸಾರ್ವಜನಿಕ ಗಣೇಶೋತ್ಸವಗಳ ಮಹತ್ವವನ್ನು, ಲೋಕಮಾನ್ಯ ಬಾಲಗಂಗಾಧರ ತಿಲಕರು ರಾಷ್ಟ್ರೀಯ ಐಕ್ಯತಾ ಭಾವನೆಯನ್ನು ಬೆಳೆಸಲು ಆರಂಭಿಸಿದಂತಹ ಈ ಹಬ್ಬದ ಹಿಂದಿನ ಆಶಯಗಳನ್ನು ಮತ್ತು ಅದರ ಮಹತ್ವವನ್ನು ನಾವು ಮರೆಯಬಾರದು. ಇದನ್ನು ಮನವರಿಕೆ ಮಾಡಲು 'ತಿಲಕರೇ ಮತ್ತೆ ನೀವು ಯಾವಾಗ ಬರುತ್ತೀರಾ' ಎಂದು ಕೇಳುವಂತಾಗಬಾರದು.

***ಮಮತಾ ಗಿರಿಯಪ್ಪ, ನೋಯ್ಡಾ***

## ಓದುಗರ ಪತ್ರ

ಸಂಪಾದಕರಿಗೆ,

ಅಭಿಮತ ತಲುಪಿತು. ಆರಂಭದಲ್ಲಿಯೇ ಸಂಘದ ಸಾಲ ಮುಗಿದ ವರದಿ ಓದಿ ತುಂಬಾ ಸಮಾಧಾನವಾಯಿತು. ಕಟ್ಟಡದ ಕೆಲಸವನ್ನು ನಿಗದಿತ ಅವಧಿಯಲ್ಲಿ ಮುಗಿಸಲು ನಾವು ಹಲವರು ನಿರಂತರವಾಗಿ ಶ್ರಮಿಸುತ್ತಿದ್ದಾಗ, ಸಾಲಕೊಳ್ಳಬಾರದು ಎಂದು ವಾದಿಸಿ, ಸಮಾವೇಶಗಳನ್ನು ನಡೆಸಿ, ನಮ್ಮ ಮೇಲೆ ಅಪಾರ ಒತ್ತಡ ಹೇರಿದ ಕೆಲವರು ಕೂಡಾ ಈಗ ನಿರಾಳವಾಗಿ ನಿಟ್ಟುಸಿರು ಬಿಡಬಹುದು. ಸಾಲವನ್ನು ನಿರಂತರವಾಗಿ ಸಂದಾಯ ಮಾಡಿದ ಎಲ್ಲ ಕಾರ್ಯಕಾರೀ ಸಮಿತಿಗಳಿಗೂ ಅಭಿನಂದನೆಗಳು.

ಕಟ್ಟಡ ನಿಧಿಗೆ ಐದು ರೂಪಾಯಿಗಳನ್ನು ಎಂ.ಓ ಮಾಡಿ ರಶೀದಿ ಕಳಿಸಬೇಡಿ, ಕಳಿಸಿದರೆ ಈ ಐದು ರೂಪಾಯಿ ಅದಕ್ಕೆ ಖರ್ಚಾಗುತ್ತದೆ, ಈ ಹಣ ನಿಮ್ಮ ಕಟ್ಟಡಕ್ಕೇ ಖರ್ಚಾಗಬೇಕು ಎಂದು ಎಚ್ಚರಿಸಿದ ಬೆಂಗಳೂರಿನ ರಿಕ್ಷಾ ಚಾಲಕ ಶ್ರೀ ಅಬ್ದುಲ್ಲ ಅವರನ್ನು ಆದಿಯಾಗಿ ಧನ ಸಹಾಯ ನೀಡಿದ ಎಲ್ಲ ಮಹನೀಯರನ್ನೂ ಈ ಸಂದರ್ಭದಲ್ಲೆ ನೆನೆಸಿಕೊಳ್ಳೋಣ.

ಅಭಿಮತದ ಹೊಸ ಬಗೆಯ ವಸ್ತು ಮತ್ತು ವಿನ್ಯಾಸ ಆಕರ್ಷಕವಾಗಿದೆ. ಕಾಶ್ಮೀರದ ಬಗ್ಗೆ ನಾವೆಲ್ಲ ಅನೇಕ ಲೇಖನಗಳನ್ನು ಓದಿದ್ದರೂ, ಕನ್ನಡಿಗರೊಬ್ಬರ ಅನುಭವವನ್ನು ಕನ್ನಡದಲ್ಲಿಯೇ ಓದುವ ಸುಖ ಬೇರೆ. ಸಮಸ್ಯೆಯ ಎರಡೂ ಮುಖಗಳನ್ನು ಶ್ರೀ ಪ್ರಶಾಂತ್ ಅವರು ನಿಷ್ಪಕ್ಷವಾಗಿ ಮತ್ತು ಮಾರ್ಮಿಕವಾಗಿ ವಿವರಿಸಿದ್ದಾರೆ. ಮುಗಿಯುವ ಮುನ್ನವೂ ಸೇರಿದಂತೆ ಉಳಿದ ಲೇಖನಗಳು ಪ್ರೌಢವಾಗಿವೆ.

ಶ್ರೀಮತಿ ಉಷಾ ಭರತಾದ್ರಿಯವರು ನಿರಂತರವಾಗಿ ಬಹಳ ವರ್ಷಗಳ ಕಾಲ ದಣಿವರಿಯದೆ ದುಡಿದು, ತಮ್ಮ ತಂಡದವರೊಂದಿಗೆ ಸದಭಿರುಚಿಯ ಅಭಿಮತವನ್ನು ನಮಗೆಲ್ಲ ಕೊಟ್ಟಿದ್ದಾರೆ. ಈಗ ಅದು ಇನ್ನಷ್ಟು ಬೆಳೆದು ಹೊಸ ರೂಪದೊಂದಿಗೆ ಕಾಣಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ.

ಇದಕ್ಕೆಲ್ಲ ಕಾರಣಕರ್ತರಾದ ಹೊಸ ಕಾರ್ಯಕಾರಿ ಸಮಿತಿಗೆ ಅಭಿನಂದನೆಗಳು, ಈ ಉತ್ಸಾಹ, ಸದಭಿರುಚಿ, ದಣಿವರಿಯದ ದುಡಿಮೆ ಹಾಗೆಯೇ ಮುಂದುವರಿಯಲಿ. ಸಂಘ ದೊಡ್ಡದಾಗಿರಲಿ, ಅದರ ಮುಂದೆ ನಾವೆಲ್ಲರೂ ಚಿಕ್ಕವರಾಗಿರೋಣ.

***ಪುರುಷೋತ್ತಮ ಬಿಳಿಮಲೆ, ನವದೆಹಲಿ***

# ಬೇಲಿ ಮತ್ತು ದಾರಿ

ಗಡಿಯಾಚೆಯ ಶತ್ರುಗಳು ಬಂದೆರಗಿ ನಮ್ಮ ಸ್ವತ್ತನ್ನು ಕೊಂಡೊಯ್ಯದಂತೆ ನಾವು ಬೇಲಿಗಳನ್ನು ನಿರ್ಮಿಸುತ್ತೇವೆ. ಬೇಲಿಗಳಿರುವುದು ನಮಗೆ ಬೇಡವಾದವರನ್ನು ತಡೆಯಲು. ನಮ್ಮ ಪರಿಧಿಯ ಒಳಗಿನದು ಮತ್ತು ಹೊರಗಿನದು ಎಲ್ಲರದ್ದು ಎಂದು ತಿಳಿದಾಗ ಗಡಿಯಾಗಲೀ, ಬೇಲಿಯಾಗಲೀ ಇರುವುದಿಲ್ಲ.

ಸಣ್ಣ ಗಿಡವನ್ನು ಬೆಳೆಸುವಾಗ ಸುತ್ತ ಬೇಲಿ ಹಾಕುವುದು ಸಹಜ. ಗಿಡ ಬೆಳೆದು ಮರವಾದ ಮೇಲೆ ಅದರ ನೆರಳಿಗೆ ಯಾರೂ ಬಾರದಂತೆ ಬೇಲಿ ಹಾಕುವುದಿಲ್ಲ. ಮರದ ಮೇಲೆ ಹಕ್ಕಿಗಳು ಮತ್ತು ಚಿಕ್ಕ ಪ್ರಾಣಿಗಳು ಬಂದು ಮನೆ ಮಾಡದಂತೆ ಬೇಲಿ ಹಾಕುವುದಿಲ್ಲ. ಅದು ನನ್ನ ಮರ, ಇನ್ಯಾರೋ ಬಂದು ಅದರ ನೆರಳಲ್ಲಿ ಕುಳಿತರೆ ನನ್ನ ಮರ ಬೀಳಬಹುದು ಎಂದು ಗಿಡ ನೆಟ್ಟವರು ಬೇಲಿ ಹಾಕಲು ಹೊರಟರೆ ಮರ ಬೆಳೆಯಲಾರದು, ಸಾಯಬಹುದು.

ನಮ್ಮ ಬುದ್ಧಿಮತ್ತೆಗೆ, ವಿಚಾರಗಳಿಗೆ ಬೇಲಿ ಹಾಕಿದಾಗ ನಾವು ನಮ್ಮ ಸುತ್ತಲಿನ ಭೌತಿಕ ಜಗತ್ತಿಗೂ ಬೇಲಿ ಹಾಕುತ್ತೇವೆ. ನಮ್ಮ ಬುದ್ಧಿ ಮತ್ತು ವಿಚಾರಗಳು ಪ್ರಬುದ್ಧವಾದಾಗ ನಮಗಿಂತ ಭಿನ್ನವಾದ ವಿಚಾರಗಳ ಬಗ್ಗೆ ಭೀತಿಯಿರುವುದಿಲ್ಲ. ನಾವು ನಮ್ಮ ವಿಚಾರಗಳಿಂದ ಒಳ್ಳೆಯವರಾಗಿದ್ದರೆ ನಮ್ಮಿಂದ ಭಿನ್ನವಾದ ವಿಚಾರದವರೇನು ಕೆಟ್ಟವರಾಗಬೇಕಿಲ್ಲ.

ಹೊಸದನ್ನು ನಾವು ಪಡೆಯುವಾಗ ನಮಗೆ ಹೊಸದೊಂದು ದಾರಿ ಸಿಗುವುದು. ಎಲ್ಲದಕ್ಕೂ ಹೊಸದೊಂದು ದಾರಿಯಿದೆ ಎಂದು ನಾವು ತಿಳಿದಾಗ ನಮಗೆ ಬೇಲಿ ಹಾಕುವುದು ಮುಖ್ಯವಾಗುವುದಿಲ್ಲ, ಬದಲು ಹೊಸ ದಾರಿಯಲ್ಲಿ ಹೋಗಲು ಹೊಸ ಸಹ ಪಯಣಿಗನನ್ನು ಹುಡುಕುವುದು ಮುಖ್ಯವಾಗುತ್ತದೆ.

ದೆಹಲಿ ಕರ್ನಾಟಕ ಸಂಘ ಬೆಳೆದು ನಿಂತ ಮರ. ಅದರ ನೆರಳಲ್ಲಿ ಹೊಸ ತಲೆಮಾರಿನ ಹೊಸ ಮುಖಗಳು ಹೊಸ ವಿಚಾರಗಳನ್ನು ತಂದು ಸಂಘವನ್ನು ಬೆಳೆಸಲು ಗಿಡ ನೆಟ್ಟು ಪೋಷಿಸಿದವರು ನೆರವಾಗಬೇಕೆ ಹೊರತು ಬೇಲಿ ಹಾಕಬಾರದು.

ಸಂಘ ಬೆಳೆಯಲು ನೀರೆರೆದವರಲ್ಲಿ ಕೆಲವರು ದೂರದ ಬೆಂಗಳೂರಿನಲ್ಲಿ ಸಂಘದ ನೆಪದಿಂದ ನಮ್ಮ ಕಾಲದ ಮಹಾನ್ ಮೇಧಾವಿಯೊಬ್ಬರ ಜತೆ ಬೆರೆಯಲು ಸಾಧ್ಯವಾಯಿತು. ಅದರಂತೆ ದೂರದ ಕರ್ನಾಟಕದಿಂದ ಬಂದು ದೆಹಲಿಯಲ್ಲಿ ನೆಲೆಸಲು ಬಯಸುವ ಹೊಸಬರಿಗೆ ಸಂಘ ನೆರಳು ನೀಡುವ ಮರವಾಗಲಿ ಮತ್ತು ಅವರು ಬಾರದಂತೆ ಬೇಲಿ ಹಾಕದಿರಲಿ.

ದಾರಿ ದೂರವಿದೆ. ಪ್ರತಿ ಹೆಜ್ಜೆಯೂ ಹೊಸತು. ಅ

*ಬಾಲಕೃಷ್ಣ ನಾಯ್ಕ್ ಡಿ.*



Delhi Karnataka Sangha Abhimatha Monthly,
September - 2013, Price Rs.1/- RNI Regn. No. 53405/91, DL-SW-1/4016/13-15
Printout Date : September 8th / 9th, Postal Date :10th / 11th, Total Pages-24

www.puravankara.com
sales@puravankara.com

PURAVANKARA

# VENICE CALLING.

Your last chance to own a Venetian home in Bangalore.




**Purva Venezia,** Yelahanka, Bangalore. 2 & 3 BHK Apts. 1276 to 1614 sq.ft.

Live in Venice, even while you're in Bangalore. Live amidst the finest amenities and ambience - truly international in every sense. Live next door to a 1,600 acres UAS Campus. Live a life that's way above ordinary.

**Call: +91 80 44 55 55 55**

**Puravankara Projects Limited:** 130/1, Ulsoor Road, Bangalore - 560042. Sales office on Ulsoor Road open from 9 am to 6 pm on all days. Purva Venezia is financed by Trustee Partner: IL&FS Trust Company Limited SMS 'Purva Venezia from <your location>' to 90088 90088, and get driving directions on your mobile phone. CREDAI

SANKALP

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770